"Service of the Poor is the Service of God".

ವಾರ್ಷಿಕ ಚಂದಾ ಒಂದು ರೂಪಾಯಿ ಮಾತ್ರ!!! ಅಂಚೆವೆಚ್ಚ ನಾಲ್ಕಾಣೆ.

A HIGH CLASS RUPEE-MAGAZINE TO SUIT ALL INTERESTS.

ಸರ್ವಜನರುಚಿಗೊಪ್ಪುವ ಕನ್ನಡ ಮಾಸಪತ್ರಿಕೆ. [ಬಿಡಿ ಸಂಚಿಕೆ ಆಣೆ ೦—೧—೬.

ಓಂ

BADAVARA BANDHU

ಬಡವರಬಂಧು

EDITOR:—MANGALORE JARAPPA. ASSOCIATE EDITOR:—B. NARSAPPA.

"ಬಡವರ ಬಂಧು"ವಿನಲ್ಲಿ ಉಚ್ಚ ತರಗತಿಯು ಸಣ್ಣ ಕಥೆಗಳೂ, ಪದ್ಯಗಳೂ, ಧಾರ್ಮಿಕ ನೈತಿಕ ವಿಚಾರಗಳನ್ನೊಳಗೊಂಡ ಲೇಖಗಳೂ ಬರುವುವು. ಪತ್ರವ್ಯವಹಾರ, ಹಾಸ್ಯ, ವಿಮರ್ಶೆ, "ಟಿಟ್‌ಬಿಟ್ಸ್," ಒಳದೇಶವಿದೇಶ ವಾರ್ತೆಗಳೂ ಕೊಡಲ್ಪಡುವುವು.
ಇಂತಹ ಅಮೂಲ್ಯ ಮತ್ತು ಅತೀ ಅಗ್ಗವಾದ ಮಾಸಿಕ ಪತ್ರಿಕೆಯನ್ನು

"ಬಡವರಬಂಧು" ಕಾರ್ಯಾಲಯ, ಹಂಪನಕಟ್ಟೆ, ಮಂಗಳೂರು, ಇಲ್ಲಿಂದ ತರಿಸಿಕೊಳ್ಳಿರಿ.

ಸಂಪುಟ ೧. | ತಾರೀಕು ೧ನೇ ಅಗೋಸ್ತು ೧೯೩೨. | ಸಂಚಿಕೆ ೪.

ಭಕ್ತಿಯೆಂಬುದು ಯುಕ್ತಿಯೊಳಗು
ಪೂಜೆಯೆಂಬುದು ನಿರ್ಮಾಲ್ಯದೊಳಗು;
ಪ್ರಸಾದವೆಂಬುದು ಓಗರದೊಳಗು;
ಆಚಾರವೆಂಬುದು ಅನಾಚಾರದೊಳಗು;
ಧರ್ಮವೆಂಬುದು ಅಧರ್ಮದೊಳಗು.
ಸುಖವೆಂಬುದು ದುಃಖದೊಳಗು.
ವ್ರತವೆಂಬುದು ವೈರಾಗ್ಯದೊಳಗು;
ಆಶೆಯೆಂಬುದು ಹಿಂಸೆಯೊಳಗು;
ಇವಾವಂಗಳೂ ಇಲ್ಲದೆ
ಗುಹೇಶ್ವರಾ!
ನಿಮ್ಮ ಶರಣ ಸುಖಿಯಾಗಿದ್ದನು.

ಅನುಕ್ರಮಣಿಕೆ.

We win if we can, but we don't mind if we are beaten.

"BADAVARA BANDHU"

ಬಡವರ ಬಂಧು

ESTABLISHED 1932.

ಸಂಪುಟ ೧. | ತಾರೀಕು ೧ನೇ ಅಗೋಸ್ತು ೧೯೩೨. | ಸಂಚಿಕೆ ೪.

ಬಡವರು ಉದ್ಧಾರವಾಗಲಿ!

Let the Poor Prosper!

ಯಂತ್ರಯುಗದ ಈ ದಿನಗಳಲ್ಲಿ ಮುಷ್ಕರಗಳು (Strikes) ಹಿಂದೂ ದೇಶದ ಯಾವೆಡೆಯಲ್ಲಿಯೂ ನಿತ್ಯದ ನೋಟ. ಭಂಡವಾಳಗಾರರನ್ನು ದಾರಿಗೆಳೆಯಲು ಮಜೂರರ ಕೈಯಲ್ಲಿರುವ ಬಹು ತೀಕ್ಷ್ಣತರವಾದ ಶಸ್ತ್ರವೆಂದರೆ ಇದೊಂದೇ. ಇದನ್ನು ಸರಿಯಾದ ರೀತಿಯಲ್ಲುಪಯೋಗಿಸಿದರೆ, ಇದರಿಂದ ಸರ್ವ ಪ್ರಪಂಚವನ್ನೇ ಒಮ್ಮೆಗೆ ಸ್ತಬ್ಧೀಕರಿಸಬಹುದು. ಕ್ರೂರ ಐಶ್ವರ್ಯವಂತರನ್ನು ಇದರಿಂದ ನೆಲಕ್ಕಪ್ಪಳಿಸಿ ಬಿಡಬಹುದು. ಇದಕ್ಕಾಗಿಯೇ "**ಬಡವರ ಬಂಧು**", (Friend of the Poor) ಆದ **ಮಹಾತ್ಮಾಗಾಂಧಿ**ಯವರು ಈ ಯುಗದಲ್ಲಿ ಈ ಮಹಾ ಶಸ್ತ್ರವನ್ನು ಬಳಕೆಗೆ ತಂದರು.

ಮುಷ್ಕರವು ಪ್ರಥಮದಲ್ಲಿ ಬಾಹ್ಯ ದೇಶಗಳಲ್ಲಿ ಜನಿಸಿತಾದರೂ, ಅದು ಚೆನ್ನಾಗಿ ಬೆಳೆದು ಪರಿಪುಷ್ಟವಾದುದು ಹಿಂದೂದೇಶದಲ್ಲೆನ್ನಬಹುದು. ಅದು ಕೂಡಾ ಮಹಾ ಗಾಂಧೀಯುಗದ ಈ ದಿನಗಳಲ್ಲಿ! ಅಹಿಂಸಾತ್ಮಕ ಮತ್ತು ಕ್ರಮಗತವಾದ ಮುಷ್ಕರಗಳಲ್ಲಿ ಗಾಂಧಿಜೀಯವರಿಗೆ ಅಗಾಧವಾದ ಭರವಸೆಯಿದೆ. ಎಲ್ಲಿ ಕ್ರೂರ ಭಂಡವಾಳಗಾರರ ಉಪಟಳದ ಪರಮಾವಧಿಯು ಬಡ ಮಜೂರರ ಮೇಲೆ ಶಕ್ತಿಪ್ರದರ್ಶನವನ್ನು ಮಾಡಿತೋ, ಎಲ್ಲಿ ಅನೀತಿಯುತ ಸಿರಿವಂತರು ದೀನರಾದ ಕೂಲಿಗಾರರ ಮೇಲೆ ದ್ರವ್ಯಮದದಲ್ಲಿ ಭಾರವಾದ ತಮ್ಮ ಪಾದವನ್ನಿಟ್ಟು ಅವರನ್ನು ನೆಲಕ್ಕವುಕಿದರೋ, ಅಲ್ಲಿ ಗಾಂಧಿಜೀಯವರು ಮುಷ್ಕರಗಳನ್ನುಪದೇಶಿಸುತ್ತಿದ್ದರು. ಒಂದೆರಡು ಸಲ ಈ ಮುಷ್ಕರಗಳು ಜಯಪ್ರದವಾದುವು. ಒಡನೆ ಅವುಗಳ ಅಪ್ರತಿಹತ ಪ್ರಯೋಜನವು ದೇಶದ ಬಡಬಾಂಧವರಿಗೆ ತಿಳಿದುಬಂತು. ಕಾಲಕ್ರಮವಾಗಿ, ಈ ಮುಷ್ಕರದ 'ಅಂಟುರೋಗ'ವು ಎಲ್ಲೆಲ್ಲೂ ಹರಡಿತು. ಅದು ಕೂಡಾ ಬಡತನದಿಂದ ಬೆಂಡಾದ ಭಾರತವರ್ಷದಲ್ಲಿ ಅದು ದಾವಾಗ್ನಿಯಂತೆ ಪಸರಿಸಿಕೊಂಡಿತು.

ಮುಂಬಾಯಿಯ ಶ್ರೀಯುತ ಜಮ್ನಾದಾಸ ಮೇಥರ ಮುಂದಾಳುತನದಲ್ಲಿ ಕಳೆದ ತಿಂಗಳ ತಾ. ೧೩ನೇ ದಿನ ಮೊದಲುಗೊಂಡು ರೈಲ್ವೇ ಮುಷ್ಕರ (Railway Strike) ಒಂದು ಪ್ರಾರಂಭವಾಗಲಿರುವುದೆಂದು ಪ್ರಕಟವಾಗಿತ್ತು. ಪ್ರಕೃತದ ಆರ್ಥಿಕ ದುರವಸ್ಥೆಯ ನೆವದಿಂದ ರೈಲ್ವೆ ಅಧಿಕಾರಿಗಳೂ ಸರಕಾರವೂ ಕೂಡಿ ೪೦,೦೦೦ ಕೆಲಸಗಾರರನ್ನು ಉದ್ಯೋಗದಿಂದ ನಿವೃತ್ತಿಪಡಿಸಿದ್ದರು. ಅಲ್ಲದೆ ಇನ್ನೂ ೪೦೦೦ ಜನರನ್ನು ಕೆಲಸದಿಂದ ತೆಗೆದುಹಾಕಲು ಆಲೋಚನೆ ಇದೆ. ಇದನ್ನು ತಡೆಯುವುದಕ್ಕಾಗಿ ರೈಲ್ವೆ ಕೆಲಸಗಾರರ ರೈಲ್ವೆ ಫೆಡರೇಶನ್ ಎಂಬುದೊಂದು ಸ್ಥಾಪಿಸಲ್ಪಟ್ಟಿದೆ. ಇದರ ಮುಂದಾಳುಗಳು ತಮ್ಮ ಜನರ ಸಂಕಷ್ಟಗಳನ್ನು ರೈಲ್ವೆ ಏಜಂಟರಿಗೂ ಸರಕಾರಕ್ಕೂ ನಿವೇದಿಸಿರುವರು. ಹೊಸಬರಿಗೆ ಉದ್ಯೋಗವನ್ನು ಕೊಡಬಾರದೆಂದೂ, ಸ್ವೇಚ್ಛೆಯಿಂದಲೇ ಉದ್ಯೋಗದಿಂದ ನಿವೃತ್ತಿಹೊಂದುವವರಿಗೆ ತಕ್ಕ ದ್ರವ್ಯಸಹಾಯವನ್ನು ಕೊಡಬೇಕೆಂದೂ, ಕೆಲಸದ ಸಮಯವನ್ನು ಕಡಿಮೆಮಾಡಬೇಕೆಂದೂ ಇವರ ಕೇಳಿಕೆಯಾಗಿರುತ್ತದೆ. ಅಲ್ಲದೆ ಈ ರೈಲ್ವೆ ಕೆಲಸಗಾರರ ಇನ್ನೆರಡು ಶರ್ತಗಳಾವುವೆಂದರೆ (೧) ರೈಲ್ವೆ ಅಧಿಕಾರವು ಈ ಒಂದು ಸಂಕಷ್ಟಮಯ ವರ್ಷದ ಬಗ್ಗೆ ಮೂರು ಕೋಟಿ ರೂಪಾಯಿಗಳನ್ನು, ವೆಚ್ಚ ಕಳೆದುಳಿದ ೧೫ ಕೋಟಿ ರೂಪಾಯಿಯ ರೈಲ್ವೆ ಡಿಪ್ರಿಸಿಯೇಶನ್ ಫಂಡಿನಿಂದ ತೆಗೆದು, ಅದರಿಂದ ತನ್ನ ಕೆಲಸಗಾರರಿಗೆ ಸತ್ಸಾಹವನ್ನೀಯಬೇಕು. (೨) ಇದಾಗುವುದಿಲ್ಲವೆಂದಾದರೆ, ರೈಲ್ವೆ ಕೆಲಸಗಾರರಿಗೆ ವರ್ಷಕ್ಕೆ ಒಂದು ತಿಂಗಳಿನ ರಜೆಯನ್ನು ಸಂಬಳ ರಹಿತವಾಗಿ ಕೊಡುವಂತಾಗಬೇಕು; ಬಹುಮಂದಿ ಕೆಲಸಗಾರರನ್ನು ಒಮ್ಮೆಲೆ ಉದ್ಯೋಗದಿಂದ ತಳ್ಳಿ ಹಾಕುವ ಬದಲಿಗೆ ಈ ಕ್ರಮವನ್ನು ಸುಲಭದಿಂದ ಕೈಗೆ ತೆಗೆದುಕೊಳ್ಳಬೇಕು.

ಮೇಲಿನ ಶರ್ತಗಳಿಗೆ ಅಧಿಕಾರಿಗಳು ಗಮನವನ್ನೀಯದಿದ್ದರೆ, ಸಮಗ್ರಹಿಂದೂದೇಶದ ೯೦೦೦ದಿಂದ ೧೦೦೦೦ ಸ್ಟೇಶನುಗಳಲ್ಲಿ ದಿನಂಪ್ರತಿ ಬೆಂದು, ಬಳಲಿ, ದುಡಿಯುತ್ತಿರುವ ಸಾಧಾರಣ ೭೨೫೦೦೦ ಮಜೂರಿಗಾರರು ಕೈಕಟ್ಟಿ ಕುಳಿತುಬಿಡುವರು. ಈ ಚಳವಳಗಾರರು ಅಹಿಂಸಾಮಯರಾಗಿಯೇ ಇರಬೇಕೆಂದು ಶ್ರೀ। ಜಮ್ನಾದಾಸ ಮೇಥರ ಅರಿಕೆಯಿದೆ; ಆದರೆ ಮೊದಲೇ ಕೂಲಿಗಾರರು; ಅದರಲ್ಲೂ ಹಸಿದ ತೋಳಗಳಂತಿರುವ ರೈಲ್ವೆ ಕೆಲಸಗಾರರು; ಇವರು ತಮ್ಮ ಚಳವಳವನ್ನು ಎಷ್ಟರಮಟ್ಟಿಗೆ ಅಹಿಂಸಾತ್ಮಕರಾಗಿ ಸಾಗಿಸಲು ಸಮರ್ಥರೆಂಬುದನ್ನು ನಾವೇ ಊಹಿಸಿಬಿಡಬಹುದು. ಅಂತೂ ರೈಲ್ವೆ ಬೋರ್ಡಿನವರೂ ಹಿಂದೀಯ ಸರಕಾರವೂ ಹಿಂದೂಸ್ಥಾನವನ್ನು ಈ ಚಳವಳದ ಬೆಂಕಿಯಲ್ಲಿ ದೊಬ್ಬಿಬಿಡದಂತೆ ಯತ್ನಿಸುವುದು ವಿಹಿತವು. ಈ ಮುಷ್ಕರಗಾರರು ಕೇಳುವ ೩ ಕೋಟಿ ರೂಪಾಯಿಗಳನ್ನು ಡಿಪ್ರಿಸಿ

ಸೂಚನೆ:— "ಬಡವರ ಬಂಧು"ವಿನ ಅಷ್ಟಮಿ ಕಾಣಿಕೆಯಾಗಿ "ಹೂವಮಾಲೆ"ಯೆಂಬ ವಹಿಯನ್ನು ಇದರೊಡನೆ ನಮ್ಮ ವಾಚಕರ ಪ್ರೀತಿಪೂರ್ವಕ ಸ್ವೀಕಾರಾರ್ಥವಾಗಿ ಇಟ್ಟಿರುತ್ತೇವೆ. (ಸಂ. ಬ ಬ).

ಯೇಶನ್ ಫಂಡಿನಿಂದ ತೆಗೆದು ದ್ವಿಮುಖದ ರಿಟ್ರೆಂಚ್‌ಮೆಂಟ್ 'ನ್ಯಾಯ'ದಿಂದ ಬಳಲುವ ಮಜೂರರನ್ನು ರಕ್ಷಿಸುವಂತಾಗಬೇಕು. ಅಲ್ಲದೆ, ಅವರು ಕೇಳುವ ವಾರ್ಷಿಕ ಮೂವತ್ತು ದಿನಗಳ ರಜೆಯ ಹಕ್ಕನ್ನು ಅವರಿಗೆ ಕೊಡುವಂತಾಗಬೇಕು. ಹೀಗಾಗುವುದಿಲ್ಲವಾದರೆ, ರೈಲ್ವೆ ಅಧಿಕಾರಿಗಳು ತಮ್ಮ ಛಲದ ಗುರಾಣಿಯನ್ನು ಮಜೂರರ ಈ ಬಾಣದೆದುರು ಹಿಡಿದು ಅವರನ್ನು ಎದುರಾಯಿಸುವರಾದರೆ, ರೈಲ್ವೆ ಮುಷ್ಕರವು ದೇಶವನ್ನು ಹಾಳು ಮಾಡುವುದೇ ಸರಿ.

ರೈಲ್ವೆ ಮುಷ್ಕರವು ಒಂದು ವೇಳೆ ಮುಂದಕ್ಕೆ ನಡೆನೇ ಹೋಗುವುದಾದರೆ, ಈ ಚಳವಳನನ್ನು ನಡೆಸುವುದಕ್ಕಾಗಿ ಒಂದು ಕಾರ್ಯಕಾರೀ ಮಂಡಳಿ (Committee of Action) ಮೊದಲು ಸ್ಥಾಪಿತವಾಗುವುದು. ಇದು ತನ್ನ ಪ್ರತಿನಿಧಿಗಳನ್ನು ಆಯಾಯಾ ಸ್ಟೇಶನುಗಳಿಗೆ ಕಳುಹಿಸಿ, ಅಲ್ಲಿಯ ಕೂಲಿಗಾರರು ಕೈಕಟ್ಟುವಂತೆ ಮಾಡುವುದು. ಹಾಗೆ ಕೈಕಟ್ಟಿ ಕುಳಿತ ಮಜೂರಿಗಾರರ ಅಶನಾರ್ಥವಾಗಿ "ಸ್ಟ್ರೈಕ್ ಕಮಿಟೀ"ಯು ಕೂಡಿದಷ್ಟು ಮಟ್ಟಿಗೆ ಸಹಾಯಮಾಡುವುದು. ೧೦೦೦ ದಲ್ಲಿ ೨೫ ಮಂದಿ ಮಜೂರಿಗಾರರಾದರೂ ತಮ್ಮ ಚಳವಳದೊಡನೆ ಸಹಕರಿಸಿ ನಡೆದರೆ ಮಾತ್ರ ತಮ್ಮ ಚಳವಳವು ಮಹಾ ಶಕ್ತಿಯುತವಾಗುವುದು ನಿಸ್ಸಂದೇಹವು ಎಂದು ಶ್ರೀ। ಜಮ್ನಾದಾಸ ಮೇಥರು ಪ್ರಕಟಿಸಿರುತ್ತಾರೆ.

ಮುಷ್ಕರವು ಹೆಚ್ಚು ದಿನಗಳ ತನಕ ಬಾಳಿದರೆ ಮತ್ತೆ ಈ ಮುಷ್ಕರ ಕಮಿಟಿಗಳು ಹೆಚ್ಚಿನ ದ್ರವ್ಯದ ಬಗ್ಗೆ ಸಾರ್ವಜನಿಕರ ಜೇಬನ್ನು ನೋಡಬೇಕಾಗುತ್ತದೆ. ಆಗ ಮಾತ್ರ, "ಸಾರ್ವಜನಿಕರು ನ್ಯಾಯವಾದ ಈ ನಮ್ಮ ಚಳವಳದ ಮೇಲೆ ಸಹಾನುಭೂತಿಯನ್ನು ತೋರಿ, ತಮ್ಮಿಂದ ಸಾಧ್ಯವಿದ್ದಷ್ಟು ಮಟ್ಟಿಗೆ ನಮಗೆ ಸಹಾಯವನ್ನು ಮಾಡಲಿ; ನಮ್ಮ ಈ ಮುಷ್ಕರವನ್ನು ಯಶಸ್ವಿಯನ್ನಾಗಿ ಮಾಡಲಿ" ಎಂದೂ ಶ್ರೀ। ಜಮ್ನಾದಾಸ ಮೇಥರು ಅರಿಕೆಮಾಡಿಕೊಂಡಿರುತ್ತಾರೆ.

ನಮ್ಮಲ್ಲಿನ ಮುಷ್ಕರಗಾರರಿಗೆ 'ಮುಷ್ಕರ'ವೆಂದರೇನೆಂದು ಸರಿಯಾಗಿ ತಿಳಿದಿರುವುದಿಲ್ಲ. ತಾವು ಕೈಕಟ್ಟಿ ಕುಳಿತು, ಇನ್ನಿತರರೂ ಹಾಗೆ ಮಾಡದೆ ಹೋದರೆ, ಅವರಿಗೆ ಹೊಡೆದು ಬಡೆದು ಅವರನ್ನು ಹಿಂಸಿಸುವುದೇ ಮುಷ್ಕರವೆಂದು ಅನೇಕ ಮಜೂರಿಗಾರರ ಭಾವನೆ ಇರುತ್ತದೆ. ಇದು ಶುದ್ಧ ತಪ್ಪು. ಮುಷ್ಕರವೆಂದರೆ ಗಾಂಧಿಜೀಯವರೆನ್ನುವಂತೆ ಆತ್ಮಶುದ್ಧತೆ (Self purification). ಅನ್ಯರು ಮಾಡಿದ ತಪ್ಪಿಗಾಗಿ ತಾವು ಬಳಲಿ, ತಮ್ಮ ಆತ್ಮಬಲದಿಂದ ಅಂತಹ ಅನ್ಯಾಯಗಾರರನ್ನು ಸದ್ದಾರಿಗೆ ತರುವುದೇ ನಿಜವಾದ ಮುಷ್ಕರವು ಅಂದರೆ; ಅಹಿಂಸಾಮಯ ಚಳವಳವೇ ಸರಿಯಾದ ಮುಷ್ಕರವು.

ಬಡವರು ಉದ್ಧಾರವಾಗಲಿ!

ಇಲ್ಲೇಕೆ ನೆಲೆಸಿರುವೆ? ದೇವಿ ಜಗದಂಬೆ!

ದೇವಮಂದಿರವುಳಿದು, ।
ಸಿಂಹಪೀಠವನಳಿದು, ।
ಇಲ್ಲೇಕೆ ನೆಲೆಸಿರುವೆ ಮಸಣದಲ್ಲಿ? ॥

ಮಳೆಗಾಳಿ ಬಿಸಿಲಿನೊಳು ।
ಮೈಯೊಡ್ಡಿ ಕುಳಿತಿರುವೆ; ।
ಚಳಿ, ಸೆಕೆಯ ಬಾಧೆಗಳ ಭಯವಿಲ್ಲವೇ? ॥

ನೆರಳಿಲ್ಲ, ತಣ್ಪಿಲ್ಲ, ।
ಹೊದಪು ಕೆರಪುಗಳಿಲ್ಲ, ।
ಆವರಣ ಮೊದಲೇ ಇಲ್ಲವಿಲ್ಲಿ, ॥

ಪಾಪಿ ಮನುಜರ ಕಣ್ಣೆ ।
ಬೀಳಲಾಗದು ಎಂದು ।
ಮಣ್ಣಿನೊಳು ಹುದುಗಿಹೆಯ ಬಲು ದುಗುಡದಿಂ? ॥

ಕಬ್ಬಿಗರು, ಗಾಯಕರು ।
ನಿನ್ನ ನುತಿಸಲಿಕೆಂದು ।
ಸನ್ನದ್ಧರಾಗಿಹರು ಪದುಮನೇತ್ರೆ ॥

ಈ ಜಗದ ದುಷ್ಕೃತ್ಯ ।
ನೋಡಲಾಗದು ಎಂದು ।
ಕಲ್ಲಾಗಿ ಮಲಗಿಹೆಯ ದೇಗುಲದಲಿ? ॥

ಕಣ್ಣಿನೊಳಗೇಕಿಷ್ಟು ।
ಕಣ್ಣೀರು ಸುರಿಯುತಿದೆ! ।
ಆರತಿಯು ಅಭಿಷೇಕವಿಲ್ಲವೆಂದೇ? ॥

ನಿರಾಕಾರಳು ನೀನು ।
ನಿರ್ಲಿಪ್ತೆ, ನಿರ್ಲಕ್ಷ್ಯೆ ।
ಈ ತಂತ್ರ ಮಂತ್ರಗಳು ನಿನಗೇತಕೆ? ॥

ನಿನ್ನ ಮರೆತರು ಜಗವು ।
ಎನ್ನ ನೀ ಮರೆಯದಿರು, ।
ಮುನ್ನ ಕೈಪಿಡಿಯೆಮ್ಮ ದೇವಿ ಜಗದಂಬೆ ॥

ಅಂಧಕಾರದಿ ಜೀವ ।
ನಂದಿಪೋಪುದು ದೇವಿ ।
ಬಂದೆನ್ನ ಸಲಹೆಮ್ಮ ದುಗುಡವಳಿದು ॥

ತಾಣವೆಲ್ಲಿಹುದೆಂದು ।
ಕಾಣದಾದೊಡೆ ನಿನಗೆ ।
ತಾಣ ಕೊಡುವೆನು ಎನ್ನ ಹೃದಯಮಂದಿರದಿ ॥

ರಾ. ಲ. ಕೃ.

Value the friendship of him who stands by you in storms.

ವಿಕ್ರಿತ ಐಶ್ವರ್ಯ.

ಲೇಖಕರು:—ಶ್ರೀಯುತ ಅ. ರಾ. ಚಂದ್ರ, ಪೂನ.

ಪೂನಾ ನಗರವು ದೊಡ್ಡ ಊರು. ದೊಡ್ಡದೆಂದರೆ ಮುಂಬಾಯಿಯಷ್ಟು ದೊಡ್ಡದಲ್ಲ; ಕಾರಣ, ಮುಂಬಾಯಿಂತೆ ಪೂನವು ವ್ಯಾಪಾರ ಸ್ಥಳವಲ್ಲ. ಅಲ್ಲಿರುವಷ್ಟು ಜನಸಂಖ್ಯೆಯೂ ಇಲ್ಲಿಲ್ಲ. ಮುಂಬಾಯಿಯಲ್ಲಿರುವಷ್ಟು ಗಜಿಬಿಜಿಯೂ ಇಲ್ಲಿಲ್ಲ. ಮುಂಬಾಯಿಯಲ್ಲಿರುವಂತಹ ದೊಡ್ಡ ದೊಡ್ಡ ಕಟ್ಟಡಗಳು ಪೂನಾದಲ್ಲಿ ತೀರಾ ಕಡಿಮೆ. ಪೂನವು ಮತ್ತಾವುದಕ್ಕೂ ಹೆಸರುಗೊಂಡಿಲ್ಲ; ಆರೋಗ್ಯಕರವಾದ ಹವೆಗೆ ಮಾತ್ರ ಹೆಸರುಗೊಂಡಿದೆ. ಸ್ವಚ್ಛ ಗಾಳಿಸಂಚಾರಕ್ಕೆ ತುಂಬಾ ಮೈದಾನುಗಳಿವೆ. ಅಲ್ಲಲ್ಲಿ ಸಾರ್ವಜನಿಕ ಹೂದೋಟಗಳೂ, ಕೊಳಸರೋವರಗಳೂ ಇದ್ದೇ ಇವೆ. ಆದುದರಿಂದಲೇ ಹಲವು ವಿದ್ಯಾಪೀಠಗಳನ್ನು ಪೂನದಲ್ಲಿಟ್ಟಿರುವರು. ಸೈನಿಕರ ಮುಖ್ಯ ಠಾಣೆಯೂ ಪೂನವೇ. ನಗರದ ನಾಲ್ಕೆಡೆಗಳಲ್ಲಿಯೂ ಮನೆಮಠಗಳೇ ತುಂಬಿವೆ. ಅದರಲ್ಲಿಯೂ ಸುಂದರವಾದ ಮನೆಗಳು! ಪ್ರತಿ ಮನೆ ಬಾಗಿಲಲ್ಲಿಯೂ ಸಣ್ಣ ದೊಡ್ಡ ಹೂದೋಟಗಳು. ಮುಂಬಾಯಿಯಲ್ಲಿನ ಧನಿಕರನೇಕರು ಪೂನದಲ್ಲಿ ವಾಸಿಸುವರು. ಆದರೆ ಮನೆಮಠಗಳಿಂದಲೇ ತುಂಬಿದ ಪೂನಾ ನಗರದ ಬೀದಿಗಳಲ್ಲಿ ಟ್ರಾಮುಗಳಂತೂ ಇಲ್ಲ. ಮೋಟಾರು ಗಾಡಿಗಳೂ ಕಡಿಮೆ. ಮನೆಗೆಲಸಕ್ಕೆ ಬೇಕಾಗುವ ಸಣ್ಣ ಪುಟ್ಟ ಸಾಮಾನುಗಳನ್ನೂ ಹಣ್ಣುಹಂಪಲುಗಳನ್ನೂ ಮಾರುವ ಕೈಗಾಡಿಗಳ ಸಂಚಾರವೇ ಹೆಚ್ಚು. ಸೂರ್ಯೋದಯದಿಂದ ಸೂರ್ಯಾಸ್ತಮವಾಗಿ ಒಂದೆರಡು ತಾಸುಗಳವರೆಗೆ ಬೀದಿ ಬೀದಿಗಳಲ್ಲಿ ಹಲವು ತರದ ಸಾಮಾನುಗಳ ಹೆಸರುಗಳನ್ನು ಕೇಳಬಹುದು. ಪ್ರತಿ ಗಾಡಿಯ ಮ್ಹಾಲಿಕನು ಅವನವನ ಸಾಮಾನಿನ ಹೆಸರನ್ನೆತ್ತಿ ಕೂಗುತ್ತಾ ಪ್ರತಿ ಮನೆಯ ಬಾಗಿಲಿನಿಂದಾಗಿ ಗಾಡಿಯನ್ನು ದೂಡುತ್ತಾ ಹೋಗುತ್ತಿರುವುದನ್ನು ನೋಡಬಹುದು.

ಒಂದು ಸಾಯಂಕಾಲ ನಾನು ನನ್ನೊಬ್ಬ ಸ್ನೇಹಿತನೊಂದಿಗೆ ಪೂನದ ಮುಖ್ಯ ಮಾರ್ಗವಾಗಿ ಹೋಗುತ್ತಿದ್ದೆನು. ತರತರದ ಸಾಮಾನುಗಳನ್ನು ತುಂಬಿ ಎಷ್ಟೋ ಗಾಡಿಗಳು ಮುಂದೆ ಹೋಗುತ್ತಿದ್ದುವು. ಎಷ್ಟೋ ಬರುತ್ತಿದ್ದುವು. ಅವುಗಳಾವುವೂ ನಮ್ಮ ಕಣ್ಣಿಗೆ ಬೀಳಲಿಲ್ಲ, ಬಿದ್ದರೂ ಮನಸ್ಸಿಗೆ ಹೋಗಲಿಲ್ಲ. ಪರಂತು ಒಂದು ಗಾಡಿಯು ನಮ್ಮ ಮನಸ್ಸನ್ನು ಆಕರ್ಷಿಸಿತು. ಅಂದರೆ ಅದರಲ್ಲಿರುವ ಸಾಮಾನನ್ನು ಕಂಡಲ್ಲ—ಅದರ ಮ್ಹಾಲಿಕನನ್ನು ಕಂಡೂ ಅಲ್ಲ. ಅವನ ಸಾಮಾನಿನ ಹೆಸರನ್ನು ಕೇಳಿ! ಅಂತಹ ಹೆಸರನ್ನು ನಾವು ಹಿಂದೆ ಕೇಳಲೇ ಇಲ್ಲ! ವಾಚಕ ಮಹಾಶಯರಾದರೂ ಕೇಳಿರುವರೋ ಏನೋ? ನಿಜವಾಗಿಯೂ ಬಹಳ ನಿಗೂಢವಾದ ಹೆಸರು! ಎಲ್ಲರ ಮನಸ್ಸನ್ನು ಆಕರ್ಷಿಸುವ ಹೆಸರು! ಎಳೆಗೂಸಿನಿಂದ ಹಳೇ ಮುದುಕನವರೆಗಿನವರು ಇಚ್ಛಿಸುವ ಹೆಸರು. ಹೆಸರು! ಹೆಸರು!!! ಮತ್ತಾವ ಹೆಸರೂ ಅಲ್ಲ, 'ಐಶ್ವರ್ಯ! ಐಶ್ವರ್ಯ ಬೇಕೇ?!! ಐಶ್ವರ್ಯ!!! ಸ್ವಲ್ಪವೇ ಉಳಿದಿವೆ" ಎಂದು ಕೂಗಿಕೊಂಡು ಗಾಡಿಯನ್ನು ದೂಡಿಕೊಂಡು ಗಾಡಿಯವನು ಹೋಗುತ್ತಿದ್ದನು. ಐಶ್ವರ್ಯವು ಯಾರಿಗೆ ಬೇಕಿಲ್ಲ? ಯಾರಾದರೂ ಬಡವರಾಗಲು ಇಚ್ಛಿಸುವರೇ? ಇಲ್ಲ, ಎಂದೂ ಇಲ್ಲ. ಐಶ್ವರ್ಯವು ಕ್ರಯಕ್ಕೆ ಸಿಗುವುದಾದರೆ ಬಿಡುವವರಾರು?

ನಾನು ಗಾಡಿಯ ಸಮೀಪಕ್ಕೆ ಹೋದೆನು. ಗಾಡಿಯಲ್ಲಿ ಅಂತಹ ಸಾಮಾನುಗಳೇನೂ ಕಂಡುಬರಲಿಲ್ಲ. ಸಣ್ಣ ಸಣ್ಣ ಸಾಮಾನುಗಳು ಇದ್ದಂತೆ ಕಂಡಿತು. ಆದರೆ ಅವುಗಳೆಲ್ಲವನ್ನೂ ಮುಚ್ಚಿದ್ದುದರಿಂದ ಸರಿಯಾಗಿ ನೋಡಲುಸಾಧ್ಯವಿದ್ದಿಲ್ಲ. ನೋಡಲು ಸಾಧ್ಯವಿಲ್ಲವೆಂದು ನನಗೆ ಬಿಡಲು ಮನಸ್ಸು ಬರಲಿಲ್ಲ. "ಎಲೋ ಗಾಡಿಯಲ್ಲಿ ಏನಿದೆ? ಏನು ಕ್ರಯ?" ಎಂದು ಗಾಡಿಯವನೊಡನೆ ಕೇಳಿದೆನು. ಅದಕ್ಕವನು "ಮತ್ತೇನೂ ಇಲ್ಲ—ಐಶ್ವರ್ಯ! ಬರೇ ಮೂರುಮುಕ್ಕಾಲು ಕ್ರಯ" ಎಂದು ಆಡಂಬರದಿಂದ ಹೇಳಿದನು. ಆದರೆ "ನಿನ್ನ ಸಾಮಾನುಗಳನ್ನು ತೋರಿಸಲಿಕ್ಕಾಗುವುದಿಲ್ಲವೆ?" ಎಂದು ಕೇಳಿದೆನು. "ಇಲ್ಲ, ನಿಮಗೆ ಬೇಕಿದ್ದರೆ ತೆಗೆದುಕೊಳ್ಳಬೇಕು. ಇದು ಒಡಕು ಗಾಜಿನ ಪಾತ್ರೆಯಲ್ಲ, ತಿಳಿಯಿತೇ!" ಎಂದು ಹೇಳಿ ಗಾಡಿಯನ್ನು ದೂಡಲುಪಕ್ರಮಿಸಿದನು. ನಾನು ಮುಂದಕ್ಕೆ ಹೋದೆನು. ಇದನ್ನು ಕಂಡು ನನ್ನ ಸಂಗಾತಿಯು "ನಿನಗೆ ಹುಚ್ಚು—ಯಾರಾದರೂ ಐಶ್ವರ್ಯವನ್ನು ಮಾರುವುದನ್ನು ಕೇಳಿರುವೆಯಾ? ಹಳ್ಳಿನಾಡಿನ ಮೂಢರನ್ನು ಮರುಳುಗೊಳಿಸಿ ಹಣ ಸುಲಿಗೆ ಮಾಡುವ ನೆವದಿಂದ ಹೊರಟಿರುವ ಈತನ ಬಲೆಗೆ ನೀನೂ ಬೀಳುವೆಯಾ? ನಿನಗೆ ತಲೆ ಇಲ್ಲ. ನಡೆ!"—ಎಂದು ನನ್ನನ್ನು ಎಳೆದನು. ಇಷ್ಟರಲ್ಲಿ ಗಾಡಿಯು ಎಲ್ಲಿಯೋ ಅಡ್ಡಮಾರ್ಗದಲ್ಲಿ ಹೋಯಿತು. ನಾವಿಬ್ಬರೂ ಅತ್ತಿತ್ತ ತಿರುಗಾಡಿ ಮನೆಗೆ ಹೋದೆವು.

ರಾತ್ರಿಯೆಲ್ಲಾ ನನಗೆ ಅದೇ ಗಾಡಿಯ ಕನಸು; ಅದೇ ಕೂಗು ನನ್ನ ಕಿವಿಯೊಳಗೆ—ನಿದ್ದೆಯೇ ಬಾರದು. ಮೂರು ಮುಕ್ಕಾಲಿಗಾಗಿ ಆಸೆ ಮಾಡಿದೆನು. ಅದನ್ನು ಒಂದು ವೇಳೆ ತೆಗೆದುಕೊಳ್ಳುತ್ತಿದ್ದರೆ ನಾನು ಐಶ್ವರ್ಯವಂತನೇಕಾಗಬಾರದಿತ್ತು? ಎಂಬ ಹಲವು ಆಲೋಚನೆಗಳು ತರಂಗ ತರಂಗಗಳಾಗಿ ನನ್ನ ಮನಸ್ಸಿಗೆ ಬರುತ್ತಿದ್ದುವು. ನಾಳೆಯ ದಿವಸ ನಾನೊಬ್ಬನೇ ಹೋಗಿ, ಆ ಬೀದಿಯಲ್ಲಿ ಕಾದು ನಿಂತು, ಮೂರು ಮುಕ್ಕಾಲಲ್ಲ, ಹತ್ತು ರೂಪಾಯಿಗಳನ್ನಾದರೂ ಕೊಟ್ಟು "ಐಶ್ವರ್ಯವನ್ನು ಕೊಂಡುಕೊಂಡೇ ಸಿದ್ಧ" ಎಂದು ನಿರ್ಧರಿಸಿದೆನು.

ಮರುದಿನ ಬೆಳಿಗ್ಗೆ ಎದ್ದವನೇ ಆಫೀಸಿಗೆ ಹೋಗಿ ಒಂದು ದಿವಸದ ರಜೆಗಾಗಿ ಕೇಳಿಕೊಂಡೆನು. ಹತ್ತು ರೂಪಾಯಿಗಳನ್ನು ತೆಗೆದುಕೊಂಡು ಹತ್ತು ಗಂಟೆಗೆ ಸರಿಯಾಗಿ ಅದೇ ಬೀದಿಯಲ್ಲಿ ಕಾದು ನಿಂತೆ; ಕಾದೆ, ಎಲ್ಲಿಯ ತನಕ? ಸಾಯಂಕಾಲ ಐದು ಘಂಟೆಯ ವರೆಗೆ. ಊಟವಿಲ್ಲದೆ ಬಿಸಿಲಲ್ಲಿ ನಿಂತಲ್ಲಿಯೆ ನಿಂತಿದ್ದೆ. ಇದು ಐಶ್ವರ್ಯದ ಮಹಿಮೆ!!! ಐದು ಗಂಟೆಗೆ ಸರಿಯಾಗಿ ಅದೇ ಗಾಡಿಯು ಅದೇ ಕೂಗಿನಿಂದ ಅದೇ ಮನುಷ್ಯನೊಡನೆ ಬಂದೇ ಬಿಟ್ಟಿತು! ನನಗೆ ಅತ್ಯಾನಂದವಾಯಿತು. ಈ ಸಾರಿ ನಾನು ಏನನ್ನೂ ವಿಚಾರಿಸಲಿಲ್ಲ. ನಾಲ್ಕಾಣೆಯ ಪಾವಲಿಯನ್ನು ಬಿಸಾಡಿದೆನು "ಕೊಡು ಐಶ್ವರ್ಯ" ಎಂದೆನು. ಆತನು ಐಶ್ವರ್ಯವನ್ನು ಕೊಡುವ ಬದಲಾಗಿ ಒಂದಾಣೆಯನ್ನು ವಾಪಾಸು ಕೊಟ್ಟು—"ಬೇಕಿದ್ದರೆ ತೆಗೆದುಕೊಳ್ಳಬೇಕು, ಸ್ವಲ್ಪವೇ ಉಳಿದುದರಿಂದ ಇವತ್ತು ಐಶ್ವರ್ಯ ಒಂದಕ್ಕೆ ಮೂರಾಣೆ ಕ್ರಯ" ಎಂದನು. "ಮೂರಾಣೆಯಲ್ಲ ಮೂರು ರೂಪಾಯಿಯಾದರೂ ನಾನು ಗಣಿಸುವವನೇ? ಆಗಲಿ ಎಲ್ಲಿದೆ ಐಶ್ವರ್ಯ? ಕೊಡು!" ಎಂದೆ. ಆತನು ಗಾಡಿಯೊಳಗಿನಿಂದ

ಭೂತ! ಭೂತ!! ಭೂತ!!!

ಲೇಖಕ:—ರಾಘವ.

ಗಾಢಾಂಧಕಾರ!—ಅಂದರೆ ಕಗ್ಗತ್ತಲೆ. ಸಾಧಾರಣ ರಾತ್ರಿ ಹನ್ನೊಂದೂವರೆ ಘಂಟೆ ಕಳೆದಿರಬಹುದು. ಮುಂಚಿನ ದಿನ ರಾತ್ರಿ ಪೇಟೆಪೇಟೆ ಹಳ್ಳಿಪಳ್ಳಿಗಳನ್ನು ಸುತ್ತಾಡಿ, ಪೋಲೀಸರ ಅಪ್ಪಣೆಯಿದ್ದೋ, ಇಲ್ಲದೆಯೋ ದೊಡ್ಡ ದೊಡ್ಡ ಅಂಗಡಿ ಮನೆಗಳಿಗೆ ಕನ್ನ ಹಾಕಿ, ಇದ್ದು ಬಿದ್ದುದನ್ನು ದೋಚಿ, ಮನೆಗೆ ತೆರಳಿ, ಹಗಲೆಲ್ಲಾ ನಿದ್ರೆಗೈದು, ಪುನಃ ತಮ್ಮ ರಾತ್ರಿಸಂಚಾರಕ್ಕೆ ಹೊರಡಲು ಕಳ್ಳಕಾಕರ ಪಂಗಡಗಳು ಅಲ್ಲಲ್ಲಿ ಸಿದ್ಧವಾಗುತ್ತಿದ್ದುವು; ಸಿ. ಐ. ಡಿ.ಗಳಿಂದ ತೋರಿಸಲ್ಪಟ್ಟಿರುವ, ಅಥವಾ ತೋರಿಸಲ್ಪಡದಿರುವ ಕೆಲವು ಐಶ್ವರ್ಯವಂತರ ಮನೆ ಮಠಗಳ ಬಾಗಿಲುಗಳನ್ನು ಒಡೆಯುವ ಗೂಢಾಲೋಚನೆಗಳನ್ನು ಆ ಪಂಗಡಗಳು ಮಾಡುತ್ತಿದ್ದುವು. ಒಂದು ಕಡೆಯಲ್ಲಿ ಹಳ್ಳಿಯ ಉಪ್ಪನ್ನು ಬಿಟ್ಟು, ಕೋಣದ ಬಾಲವನ್ನು ಮರೆತು, ಕೋಮಲ ವಿಲಾಸದ ತುಪ್ಪದೋಸೆಯನ್ನು ತಿನ್ನಲು, ಇಂಗ್ಲಿಷು ವಿದ್ಯೆಯನ್ನು ಕಲಿಯುವ ನೆವದಿಂದ ಹಳ್ಳಿಗಳಿಂದ ಪೇಟೆಗೆ ಬಂದಿದ್ದ ಕೆಲವಿದ್ಯಾರ್ಥಿಗಳು ತಮ್ಮ ಲೋಜಿನ ವಾರ್ಡನನೂ, ಇನ್ನಿತರ ಹುಡುಗರೂ ಮಲಗಿದ ಮೇಲೆ, ತಮ್ಮ "ಪ್ರೈವೇಟ್ ರೂಮು"ಗಳಿಂದ ಮೆಲ್ಲಗೆ ಜಾರಿಯೋ, ಹಿತ್ತಿಲ ಗೋಡೆಗಳನ್ನು ಹಾರಿಯೋ, ಮಾರ್ಗಕ್ಕಿಳಿದು, ಹೆತ್ತವರು 'ಇಂಗ್ಲಿಷ್' ಕಲಿಯಲು ತಮಗೆ ತಂತಿದ್ವಾರಾ ಕಳುಹಿಸಿದ ಹಣವನ್ನು ಜೇಬಿನಲ್ಲಿ ಹಾಕಿಕೊಂಡು, ಅದರ ಕಿಣಿ ಕಿಣಿ ಶಬ್ಧವಾಗದಂತೆ ಜೇಬನ್ನು ಒಂದು ಕೈಯಿಂದ ಒತ್ತಿ ಹಿಡಿದು, ತಾವು ಹಗಲಲ್ಲಿ ಶಾಲೆಗೆ ಹೋಗುವ ನೆವದಿಂದ ಕೇರಿಗೆ ಹೋಗಿ ಆರಿಸಿಕೊಂಡು, ಭಾಷೆಕೊಟ್ಟು ಬಂದಿದ್ದ ವೇಶ್ಯಾರಮಣಿಯರ ಬಳಿಗೆ ಓಡುತ್ತಿದ್ದಾರೆ. ಫೆಬ್ರುವರಿ ತಿಂಗಳಾಗಿದ್ದುದರಿಂದ ಕೆಲವು ಕಡೆಗಳಲ್ಲಿ ಕೆಲ ವಿದ್ಯಾರ್ಥಿಗಳು ಮೇಜಿನ ಮೇಲೆ ಮೂನ್‌ಲೇಂಪನ್ನಿಟ್ಟುಕೊಂಡು ಪರೀಕ್ಷೆಯ "ಪ್ರೀಪರೇಶನ್" ಬಗ್ಗೆ ತಮ್ಮ ಪುಸ್ತಕವನ್ನು ದಿಟ್ಟಿಸಿ ನೋಡುತ್ತಾ, ಓದುತ್ತಾ, "ಪಾಠವು ಮನಸ್ಸಿನೊಳಗೆ ಹೊಕ್ಕಿಬಿಡುವುದೇ ಇಲ್ಲವಲ್ಲ" ಎಂಬ ಉದ್ಗಾರವನ್ನೆತ್ತುತ್ತಾ, ಯೋಚಿಸುತ್ತಾ ಯೋಚಿಸುತ್ತಾ, ಕೊನೆಗೆ ತಮ್ಮ ಕ್ಲಾಸುಗಳಲ್ಲಿ ಸಹಪಾಠಿಣಿಗಳಾಗಿರುವ ಚೆಲುವೆಯರ ಮೋರೆ ಬೈತಲೆ, ಉಬ್ಬಿದ ಎದೆ, ಬೆಳೆದ ನಡು ಮೊದಲಾದುವುಗಳ ಚೆಲುವಿಕೆಯನ್ನು ಮನಸ್ಸಿನೊಳಗೂ ತಲೆಯೊಳಗೂ ತೆಗೆದುಕೊಂಡು, ಆ ಅಂಗನಾಮಣಿಗಳ ಧ್ಯಾನವನ್ನು ಮಾಡುತ್ತಾ ಎಣ್ಣೆಯ ಹೋಮವನ್ನು ಮಾಡುತ್ತಿದ್ದಾರೆ. ಪಾಪದ ಆ ನಾರೀಮಣಿಗಳು ತಮ್ಮ ತಮ್ಮ ಮನೆಗಳಲ್ಲಿ ಹಾಸಿಗೆಯ ಮೇಲೆ ಕಾಲು ಮಡಚಿಯೋ, ಅರೆ ನಿದ್ರೆಯಲ್ಲಿ ಹಾಸಿಗೆಯ ಮೇಲೆ ಹೊರಳಾಡಿಯೋ, ತಮ್ಮ ಇತರ ಪ್ರಾಣಪ್ರಿಯರುಗಳು ತಮ್ಮೊಡನೆ ಸರಸಸಲ್ಲಾಪಗಳನ್ನಾಡುತ್ತಿದ್ದ ಕನಸನ್ನು ಕಾಣುತ್ತಿದ್ದರಾದರೂ, ಮೇಲಿನ ಈ ವಿದ್ಯಾರ್ಥಿಗಳು ಮಾತ್ರ ಆ ರಮಣಿಯರೆಲ್ಲಾ ಆ ಮಧ್ಯರಾತ್ರಿಯಲ್ಲೂ ತಮ್ಮ ಬಳಿಯೇ ಇರುತ್ತಿರುವರೆಂದು ಕಲ್ಪಿಸಿಕೊಂಡು ಸ್ವಾನಂದ ತುಂದಿಲರಾಗಿದ್ದಾರೆ. ನಿಶಿರಾಯನ ಪ್ರಭಾವವು ಲಗುಬಗೆಯಿಂದ ಮೆರೆಯುತ್ತಿರುವ ಸಮಯವಾದುದರಿಂದ ಅನೇಕ ಕಡೆಗಳಲ್ಲಿ ದುಷ್ಕಾರ್ಯಗಳೇ ನಡೆಯುತ್ತಿದ್ದುವು. ಎಲ್ಲಿ ನೋಡಿದರೂ ಕಳ್ಳತನ; ಎಲ್ಲಿ ನೋಡಿದರೂ ದರೋಡೆ—ಪೋಲಿ. ತಾಪದ ಕೋಪ. ಮಾರನ ತಾಪದಿಂದ ಬೆಂದು ಬಳಲುತ್ತಿದ್ದ ಕೆಲವು ಧೀರ ವೀರ ಗಂಡಸರು ಬಿಸಿರಕ್ತದಿಂದ ಬಿಸಿಯೇರಿದ ಮೈಯುಳ್ಳವರಾಗಿ ತಮ್ಮ ಪತ್ನಿಯರೇ ತಮ್ಮನ್ನು ಮೊದಲು ಮಾತನಾಡಿಸಬೇಕೆಂಬ, ಪೊಳ್ಳು ಹಟವನ್ನು ತೊಟ್ಟುಕೊಂಡು ಎಚ್ಚರದಲ್ಲಿದ್ದುಕೊಂಡೇ ಸುಮ್ಮಗೆ ಘೋರನಿದ್ರಾಪರವಶರಾಗಿದ್ದಂತೆ ನಟಿಸುತ್ತ ತಮ್ಮ ಸತಿಯರ ಕಿವಿಗಳಿಗೆ ಬಿಸಿಯುಸುರನ್ನು ಊದುತ್ತಿದ್ದಾರೆ. ಅಂತಹ ಬೆಚ್ಚಗಿನ ಗಾಳಿಯಿಂದಾಗಿ ಚೇತರಿಸಿಕೊಂಡ ಸತಿಯರು ಕತ್ತಲೆಗೆ ಹೆದರಿ ಬಳಿಯಲ್ಲಿದ್ದ ತಮ್ಮ ಪತಿಯರ ಕೊರಳುಗಳನ್ನು ಬಿಗಿದಪ್ಪಿ, ಅವರನ್ನು ಎಚ್ಚರಿಸುತ್ತಿದ್ದಾರೆ. ಕೆಲವು ಮನೆಗಳಲ್ಲಿ ಬೆಳೆದ ವಿದ್ಯಾರ್ಥಿನಿಯರು ತಮ್ಮ ಹೆತ್ತವರು ನಿದ್ರಿಸಿ "ಗುರುಂಕು" ಹೊಡೆಯುವ ಸೂಚನೆಯನ್ನು ನೋಡಿ ಹಾಸಿಗೆಯಿಂದ ಮೆಲ್ಲನೆದ್ದು, ತಮ್ಮ ಖಾಸಗಿ ಕೋಣೆಗಳಿಗೆ ಹೋಗಿ, ದೀಪ ಹಚ್ಚಿ, ಮುಂಚಿನ ದಿನ ಹಗಲಲ್ಲಿ ಕ್ಲಾಸು ನಡೆಯುವಾಗ ಡೆಸ್ಕಿನ ಅಡಿಯಿಂದಾಗಿ ತಮ್ಮ ಪ್ರಾಣಪ್ರಿಯರಾದ ವಿದ್ಯಾರ್ಥಿಗಳು ಕೆಲವರು ರಹಸ್ಯವಾಗಿ ರವಾನಿಸಿದ ಪ್ರಣಯಪತ್ರಗಳ ರಾಶಿಗಳನ್ನು ಮೆಲ್ಲನೆ ಈಚೆಗೆ ತೆಗೆದು, ಒಂದೊಂದನ್ನೇ ಬಿಡಿಸಿ "ನಾಳೆ ಸಂಜೆ ಡ್ರಿಲ್‌ಕ್ಲಾಸಿಗೆ ತಪ್ಪಿಸಿರಿ. ಬಾವಟೆಕಟ್ಟೆಯ ಗುಡ್ಡೆಯ ಹಿಂದೆ ಮೀಟ್ ಆಗೋಣ" ಎಂದು ಉತ್ತರ ಬರೆಯುತ್ತಿದ್ದಾರೆ. ಕೆಲವು ಅವಿವಾಹಿತ ತರುಣರು ಹಾಸಿಗೆಯ ಮೇಲೆ ಹೊರಳಾಡಿ, ಹಗಲೆಲ್ಲ ತಾವು ದಾರಿಯ ಮೇಲೆ ಕಂಡಿರುವ ಚೆಲುವೆಯರನ್ನು ಕನವರಿಸಿ, "ಹಾ ಪ್ರಾಣವಲ್ಲಭೆ ಚುಂಬಿಸು" ಎಂದು ಕನಸಿನ ಭರದಿಂದ ತವಕಪಟ್ಟು, ತಮ್ಮ ತಲೆ ಅಡಿಯಲ್ಲಿನ ತಲೆದಿಂಬುಗಳಿಗೆ ಚುಂಬನವನ್ನೀಯುತ್ತಿದ್ದಾರೆ. ಒಂದು ಕಡೆಯಲ್ಲಿ ಹಗಲಲ್ಲಿ ಕೊಂಗ್ರೆಸ್ ಸ್ವಯಂಸೇವಕರ ತಲೆಗಳಿಗೆ ತಮ್ಮ ಲಾದುಗಳಿಂದ ಪೂಜೆಮಾಡಿದ ಪೋಲೀಸರು ಕೆಲವರು, ಲಂಚೆಯ ರೂಪದಿಂದ ಯಾರಿಂದಲೋ ದೊರೆತ ಸುರಾಪಾನದಿಂದ

ಒಂದು ವಸ್ತುವನ್ನು ಕೊಟ್ಟನು. ಅದನ್ನು ಕಂಡೊಡನೆ "ನೀರು! ನೀರು!" ಎಂದು ಓಡಿಹೋಗಿ ನೀರುಕುದುರೆಯನ್ನು ಕಂಡ ಮರಳುಕಾಡಿನ ಪ್ರಯಾಣಿಕನಂತೆ ನನ್ನ ಸ್ಥಿತಿಯೂ ಆಯಿತು. "ಎಲೋ, ಇದೇನೋ ಆಶ್ಚರ್ಯ, ಇದರಲ್ಲಿ ಎಲ್ಲಿದೆ ಐಶ್ವರ್ಯ?" ಎಂದು ಗದರಿಸಿ ಕೇಳಿದೆ. ಗಾಡಿಯವನೆಂದನು— "ಸ್ವಾಮಿ, ದುಡುಕಬೇಡಿರಿ. ಇದನ್ನು ಮನೆಗೆ ಕೊಂಡುಹೋಗಿ, ವಿರಾಮಕಾಲದಲ್ಲಿ ಇದರಿಂದ ಕೆಲಸಮಾಡುತ್ತಿರಿ. ಇದರಿಂದ ದಿನ ಒಂದಕ್ಕೆ ಮೂರು ನಾಲ್ಕಾಣೆಗಳು ಬರುವುವು, ಸುಳ್ಳಲ್ಲ. ಈ ನಾಲ್ಕಾಣೆಗಳು ನಿಮ್ಮ ಎಂದಿನ ಸಂಪಾದನೆಗಿಂತ ಹೆಚ್ಚಿನದಾದುದರಿಂದ ಅವುಗಳು ಹಾಗೆಯೇ ಉಳಿದು ಒಂದೆರಡು ವರ್ಷಗಳಲ್ಲಿ ನೀವು ಧನಿಕರಾಗಿಯೇ ಆಗುವಿರಿ" ಎಂದು ಉಪದೇಶಿಸಿ, ಐಶ್ವರ್ಯ ಗಳಿಸುವ ಆ ಯಂತ್ರದೊಂದಿಗೆ ಸ್ವಲ್ಪ ಹತ್ತಿಯನ್ನೂ ನನಗೆ ಕೊಟ್ಟನು.

ವಾಚಕವೃಂದಾ—ಐಶ್ವರ್ಯ ಗಳಿಸಲು ೩ ಆಣೆ ಕೊಟ್ಟು ಪಡೆದ ಯಂತ್ರವಾದರೂ ಯಾವುದು ಬಲ್ಲಿರಾ? ಮತ್ತಾವುದೂ ಅಲ್ಲ—ತಕಲಿ! **ತಕಲಿ!! ತಕಲಿ!!** ಇದರಿಂದ ಐಶ್ವರ್ಯವಂತನಾಗಬಹುದೇ? ನೀವೇನೆನ್ನುವಿರಿ? ಹಾಗೊಂದು ವೇಳೆ ಸಾಧ್ಯವಿದ್ದರೆ "ಬಡವರ ಬಂಧು"ವು ಬಡವರಿಗೇಕೆ ಇದರ ಮರ್ಮವನ್ನು ಹೇಳಬಾರದು? ೮೦೦೦೦ ಭಾರತೀಯರು ಸೆರೆಯ ಕತ್ತಲಲ್ಲಿರುವಾಗ ಬಡವರು ಈ ತಕಲಿಯನ್ನು ತಿರುವಿ ನೂಲನ್ನು ಮಾಡಿ ತಮ್ಮ ದಾರಿದ್ರ್ಯವನ್ನೇಕೆ ದೂರಮಾಡಬಾರದು? ಲೋಕಪೂಜ್ಯ ಮಹಾತ್ಮ ಗಾಂಧಿಯವರನ್ನು ಏಕೆ ಸಂತೋಷಗೊಳಿಸಬಾರದು?

A pessimist is a man in a dark room looking for a black hat that isn't there.

ಸ್ಸೈಮುರಿತು ಬಿಳೀ ಟೊಪ್ಪಿಯ ಗಾಂಧೀ ಪಾರ್ಟಿಯವರು ತಮಗೆ ಹಿತಬೋಧೆಯನ್ನು ಮಾಡುವಂತೆ ಕನವರಿಸುತ್ತಿದ್ದಾರೆ. ರಿಟ್ರೆಂಚ್‌ಮೆಂಟಿನ ಕಾಲವಾದುದರಿಂದ ಕೆಲವು ಸರಕಾರೀ ನೌಕರರು, ಆ ರಿಟ್ರೆಂಚ್‌ಮೆಂಟ್ ಪಲ್ಲಕಿಯು ಸ್ವರ್ಗವೆಂಬ ಸರಕಾರದಿಂದ ತಮ್ಮ ಬಳಿಗೆ ಬಂದು ತಮ್ಮನ್ನು ನಿರುದ್ಯೋಗದ ನರಕಕ್ಕೆ ಎತ್ತಿ ಹಾಕುತ್ತದೋ ಎಂದು ಭಯವಿಹ್ವಲರಾಗಿದ್ದು ಮಲಗಿ ಆಲೋಚಿಸುತ್ತಿದ್ದಾರೆ. ಇಲೆಕ್ಷನಿನ ಸಮಯವೂ ಅದೇ ಅಗಿದ್ದುದರಿಂದ ಉಮೇದ್ವಾರ ಮಹಾಶಯರುಗಳಲ್ಲಿ ಹೆಚ್ಚಿನವರೆಲ್ಲರೂ ತಮ್ಮ ಖಜಾನೆಗಳಲ್ಲಿನ ನೋಟಿನ ಕಟ್ಟುಗಳನ್ನು ಲೆಖ್ಖಮಾಡುತ್ತಾ, ಕೌನ್ಸಿಲರ್‌ಶಿಪ್ ತಮಗೆ ಸಿಕ್ಕಿದರೆ ಶ್ರೀ ವಿಠೋಬ ದೇವಸ್ಥಾನದಲ್ಲಿ ಒಂದು ಸಪ್ತಾಹವನ್ನು ಮಾಡಿಸುತ್ತೇವೆ, ಇಲ್ಲದಿದ್ದರೆ ರುಜಾರಿಯೋ ಇಗರ್ಜಿಯಲ್ಲಿ ಆರು ಬತ್ತಿ ಹೊತ್ತಿಸುತ್ತೇವೆ, ಅಥವಾ ಕುದ್ರೋಳಿ ಮಸೀದಿಯ ಡಬ್ಬಿಗೆ ನೂರು ರೂಪಾಯಿ ಹಾಕುತ್ತೇವೆ ಎಂದು ಹರಿಕೆ ಹೇಳಿಕೊಳ್ಳುತ್ತಿದ್ದಾರೆ. ಕೆಲವು ನಿರುದ್ಯೋಗಿಗಳು "ಎಂಪಾಯರ್ ಸೆಲೂನಿ"ನಲ್ಲಿ ಕೆಲವು "ವೇಕೆನ್ಸಿ"ಗಳಿವೆ ಎಂದು ಯಾರೋ ಹೇಳಿದ್ದ ಗಾಳಿ ವಾರ್ತೆಯನ್ನು ಕೇಳಿ, ಆ "ವೇಕೆನ್ಸಿ"ಗಳಿಗೆ ತಮ್ಮ "ಹಂಬಲ್ ಎಪ್ಲಿಕೇಶನ್"ಗಳನ್ನು ಐವತ್ತು ಅರುವತ್ತು ಶೀಟುಗಳಲ್ಲಿ ಬರೆಯುತ್ತಿದ್ದರೂ, ತಮ್ಮ ಹೇಂಡ್ ರೈಟಿಂಗಿನ ಮಹಿಮೆಯಿಂದಾಗಿ ಅವುಗಳಲ್ಲಿ ಒಂದಾದರೂ ಚಂದವಾಗದಿರುವುದನ್ನು ನೋಡಿ, ಅವುಗಳನ್ನು ಹರಿದು ರಾಶಿಯೊಡ್ಡುತ್ತಿದ್ದಾರೆ. ಅಕ್ಕಿ ವ್ಯಾಪಾರಿಗಳು ಕೆಲವರು ತಮ್ಮ ಡೊಳ್ಳು ಹೊಟ್ಟೆಯನ್ನು ಮಾಡಿನ ಮುಖವಾಗಿಟ್ಟು ಮಲಗಿಕೊಂಡು ಮರುದಿನ ಮಾರಲಿರುವ ಮುಸ್‌ಕತ್ತಿ ಅಕ್ಕಿಯೊಡನೆ ಬೆರಿಕೆಮಾಡಲು ಅಗ್ಗದ ಅಕ್ಕಿ ಯಾವುದಿದೆ ಎಂದು ಆಲೋಚಿಸುತ್ತಿದ್ದಾರೆ. ಕೆಲವು ವಸ್ತ್ರವ್ಯಾಪಾರಿಗಳು ತಾವು ಸ್ವದೇಶಿ ಮಾಲು ಮಾರಾಟ ಮಾಡುವವರೆಂದು ಹೇಳಿ, ಊರಲ್ಲೆಲ್ಲಾ ಪ್ರಕಟಿಸಿ, ಮೆಂಚಸ್ಟರ್ ವಸ್ತ್ರದ ದಲ್ಲಾಲಿಗಳೊಡನೆ ಬಹಳ ಗುಟ್ಟಿನಿಂದ ಚರ್ಚೆಮಾಡಿ, ಗೆದ್ದು, ವಿದೇಶಿ ವಸ್ತ್ರಗಳನ್ನು ಪಡೆದು, ಅವುಗಳಿಗೆ "ಸ್ವದೇಶಿ" ಸೀಲನ್ನು ಒತ್ತುತ್ತಿದ್ದಾರೆ. ಕೆಲವು ಪತ್ರಿಕಾ ಸಂಪಾದಕರು ಕಾಲು ಮೇಲೆ ಕಾಲು ಹಾಕಿ ಕುರ್ಚಿಯ ಮೇಲೆ ಕುಳಿತು, ತಮಗೆ ಬಂದ ವಿ. ಪಿ. ಓರ್ಡರುಗಳ ಪ್ರಕಾರ ವಿ. ಪಿ. ಕಳುಹಿಸಲು ಕೈಯಲ್ಲಿ ಹಣವಿಲ್ಲವಲ್ಲಾ ಎಂದು ಒಮ್ಮೆ ವ್ಯಸನಿಸಿ, ಪುನಃ ತಮ್ಮ ಪ್ರಿಯಪತ್ನಿಯರ ಬಂಗಾರವನ್ನು ನಾಳೆ ಕೆನರಾ ಬೇಂಕಿಂಗ್ ಕೋರ್ಪೋರೇಶನಿನಲ್ಲಿ ಈಡಿಟ್ಟು ಹಣ ಪಡೆದುಕೊಳ್ಳಬೇಕೆಂದು ನಿರ್ಧರಿಸುತ್ತಿದ್ದಾರೆ. ಕೆಲವು ಸಂಸಾರಿಕರು ಸಾಲಗಾರರ ಬಾಯಿಯಿಂದ ನಾಳೆ ತಪ್ಪಿಸುವುದು ಹೇಗೆ? ನಾಳೆ ಯಾವ ಮಾರ್ಗದಿಂದ ಹೋಗಬೇಕು? ಎಂದು ಪ್ಲೇನ್ ಮಾಡುತ್ತಿದ್ದಾರೆ. ಕೇರಿಗಳಲ್ಲಿ ಕೆಲವು ಸ್ತ್ರೀಯರು ಬೀದಿಯ ಬಾಗಿಲ ಬಳಿ ಪೌಡರ್ ಹಚ್ಚಿ ಕುಳಿತುಕೊಂಡು ಯಾರನ್ನೋ ನಿರೀಕ್ಷಿಸುತ್ತಿದ್ದಾರೆ. ಪಟ್ಟಣದಲ್ಲಿ ತೆರಿಗೆಯನ್ನು ಹೆಚ್ಚಿಸಿಯೂ, ತಮ್ಮ ವೆಚ್ಚವನ್ನು ಕಡಿಮೆ ಮಾಡಿಯೂ, ಮತ್ತೂ ನಷ್ಟ ತೋರಿಸುವ ಲೆಖ್ಖಪತ್ರಗಳನ್ನು ಹಿಡಿದುಕೊಂಡು ಕೆಲವು ಮುನ್ಸಿಪಲ್ ಅಧಿಕಾರಿಗಳು ಇನ್ನು ಯಾವ ರೂಪದಲ್ಲಿ ತೆರಿಗೆ ಏರಿಸಲಿ? ಎಂದು ಆಲೋಚಿಸುತ್ತಿದ್ದಾರೆ. ಕೆಲವು ಕೊಂಗ್ರೆಸ್‌ವಾಲರು, ಪೋಲೀಸರು ತಮಗೆ ಪೆಟ್ಟು ಕೊಡುತ್ತಿರುವ ಕನಸ್ಸನ್ನೂ, ಕೆಲವು ಇಂಗ್ಲಿಷ ಜನರು ಮಹಾತ್ಮಾಗಾಂಧಿಯವರು ತಮ್ಮೆದುರು ನಿಂತ ಕನಸ್ಸನ್ನೂ ಕಾಣುತ್ತಿದ್ದಾರೆ. ಕೆಲವು ಅಧಿಕಾರಿಗಳು ಪ್ರಜಾಹಿತಕ್ಕಾಗಿ ವಿರುದ್ಧ ಕೆಲಸಗಳನ್ನು ಮಾಡುತ್ತಿರುವುದಕ್ಕಾಗಿ, ಪಶ್ಚಾತ್ತಾಪಪಟ್ಟು, ಮೊಣಕಾಲೂರಿ, "ಪರಲೋಕದಲ್ಲಿರುವ ತಂದೆಯೇ! ನಮ್ಮನ್ನು ಕ್ಷಮಿಸು; ಈ ಹೊಟ್ಟೆಯನ್ನು ಹರಿ!" ಎನ್ನುತ್ತಿದ್ದಾರೆ. ಕೆಲವರು ಮಾತ್ರ ಸ್ವಸ್ಥಚಿತ್ತದಿಂದ ಮಲಗಿದ್ದಾರೆ.

ಇಂತಹ ವೇಳೆಯಲ್ಲಿ ನಾನೆಲ್ಲಿದ್ದೆ ಗೊತ್ತಿರುವುದೇ? ರಾತ್ರಿ ಹನ್ನೊಂದುವರೆ ಘಂಟೆಗೆ ಸಿನೆಮವು ಮುಗಿದೊಡನೆ ಒಬ್ಬನೇ ಮನೆಯತ್ತ ಕಡೆಗೆ ಹೊರಟು ನಮ್ಮ ಗದ್ದೆಯ ಕಾಲ್ಮಾರ್ಗದಲ್ಲಿ ನಡೆಯುತ್ತಿದ್ದೆ.

ಅಷ್ಟರಲ್ಲಿ ನನ್ನೆದುರು ದೂರದಲ್ಲಿ ಒಂದೆರಡು ಬೆಂಕಿಕೊಳ್ಳಿಗಳು ಹಾರ್‍ಯಾಡುತ್ತಿರುವುದು ನನಗೆ ಕಂಡು ಬಂತು. ಒಮ್ಮೆ ಮೈ ಜುಮ್ಮೆಂದಿತು! ನನ್ನ ಕಾಲು ಮುಂದೆ ಹೆಜ್ಜೆಯಿಡಲು ಹಿಂಜರಿಯುತ್ತಿತ್ತು. ಹೃದಯವು ಡಭ್ ಡಭ್ ಎಂದು ಹೊಡೆದಾಡುತ್ತಿತ್ತು. ಆ ಬೆಂಕಿಕೊಳ್ಳಿಗಳು ಕುಣಿದಾಡುತ್ತಿರುವಲ್ಲಿ ಹೊಲೆಯರ ಒಂದು ದೈವದ "ಬಬ್ಬು ಗುಡಿ"ಯಿದ್ದಿತು. ನಮ್ಮೂರ **ಭೂತ**ಗಳೆಲ್ಲವೂ ರಾತ್ರೆ ಅದೇ ಗುಡಿಯಲ್ಲಿ ವಾಸಿಸುವುವೆಂದು ನನ್ನ ಅಜ್ಜಿಯು ಹೇಳಿದ್ದ ಮಾತು ನನ್ನ ಸ್ಮರಣೆಗೆ ಬಂದು ನಾನು ದಿಗಿಲುಗೊಂಡೆ. ಸ್ವಲ್ಪ ಹೊತ್ತು ಆಲೋಚಿಸಿದೆ. . . . .

ಆ ಭೂತಗಳನ್ನು ನೋಡಬೇಕೆಂಬ ನಿರ್ಧಾರವನ್ನು ಮಾಡಿಕೊಂಡೆ. ಮೆಲ್ಲ ಮೆಲ್ಲನೆ ಮುಂದೆ ನಡೆದೆ. ಅಷ್ಟರಲ್ಲಿ ಇನ್ನೂ ಕೆಲವು ದೀವಟಿಗೆಗಳು ಬೇರೆ ಕಡೆಗಳಿಂದ ಅಲ್ಲಿಗೆ ಬಂದುವು. ಕೆಲವು ನಿಮಿಷಗಳಲ್ಲಿ ಅಲ್ಲಿ ಸುಮಾರು ಹದಿನೆಂಟು ಬೆಂಕಿಕೊಳ್ಳಿಗಳು ಒಟ್ಟು ಸೇರಿದುದು ಕಂಡು ಬಂತು. ನಾನು ಧೈರ್ಯದಿಂದ ಮುಂದೊತ್ತಿದೆ. ಸುಮಾರು ಒಂದು ಫರ್ಲಾಂಗು ದೂರದಲ್ಲಿ ನಿಂತು ಕಣ್ತೆರೆದು ನೋಡಿದೆ. ಭಯಂಕರ ಪ್ರಾಣಿಗಳೆಂದು ತೋರಲಿಲ್ಲ. ಮತ್ತೂ ಹತ್ತಿರಕ್ಕೆ ಹೋದೆ. ಒಂದು ತೆಂಗಿನ ಮರದ ಅಡ್ಡದಲ್ಲಿ ನಿಂತು ಉಸಿರನ್ನು ಕೈಯಲ್ಲಿ ಹಿಡಿದು ಇಣಿಕಿದೆ; ಎಲ್ಲಾ ಭೂತಗಳು ಕುಳಿತಂತೆ ಕಂಡು ಬಂದಿತು. ಕೆಲವಕ್ಕೆ ತಲೆಯಲ್ಲಿ ಮುಂಡಾಸುಗಳಿದ್ದುವು. (ಅವುಗಳು ದಿವಂಗತರಾದ ನನ್ನ ಹಿರಿಯರಾಗಿರಬಹುದೆಂದು ಭಾವಿಸಿಕೊಂಡೆ) ಮತ್ತೂ ನಾಲ್ಕಡಿ ಮುಂದೆ ಹೆಜ್ಜೆಯಿಟ್ಟೆ—ಒಂದು ಪೊದರಿನೆಡೆಯಲ್ಲಿ ಹೊಟ್ಟೆಯ ಮೇಲೆ ಮಲಗಿ ಅವುಗಳನ್ನು ಸರಿಯಾಗಿ ಕಂಡೆ.

ಅಷ್ಟರಲ್ಲಿ ಒಂದು ಭೂತವು "ರಡ್ಡ್ ಪಿದಾಯಿ" ಎಂದಿತು. ನನಗೆ ಅರ್ಥವಾಗಲಿಲ್ಲ. ಮತ್ತೊಂದು "ತುರುಪು ಮಕಾ" ಎಂದಿತು. ರೂಪಾಯಿಗಳ ಕಿಣಿ ಕಿಣಿಯು ಕೇಳಿಸಿತು. ಇದನ್ನು ಕಂಡು ನಾನು ಹಿಂದೆ ಜಾರಿದೆ. ಮೆಲ್ಲ ಮೆಲ್ಲನೆ ಹರಡಿಕೊಂಡು ದೂರಕ್ಕೆ ಹೋದೆ. ಅಲ್ಲಿಂದೆದ್ದು ಪೋಲೀಸ್ ಸ್ಟೇಷನಿಗೆ ಓಡಿದೆ.

ಮರುದಿನ "ಸ್ವದೇಶಾಭಿಮಾನಿ" ವರ್ತಮಾನ ಪತ್ರಿಕೆಯಲ್ಲಿ ಹೀಗಿತ್ತು. "ನಿನ್ನೆ ರಾತ್ರೆ ಇಲ್ಲಿಯ ರಾಘವರು ಸಿನೆಮದಿಂದ ಹಿಂದಿರುಗುತ್ತಾ, ಅವರ ಮನೆಯ ಮಾರ್ಗವಾಗಿ ಹೋಗುವಾಗ ದೂರದಲ್ಲಿ ಕೆಲವು ಬೆಂಕಿಕೊಳ್ಳಿಗಳನ್ನು ಕಂಡು ಭೂತಗಳೆಂದು ಭಾವಿಸಿ, ಧೈರ್ಯದಿಂದ ಅವುಗಳ ಬಳಿಗೆ ಹೋಗಿ ನೋಡಲು, ಅವುಗಳು ಅಲ್ಲಿದ್ದ "ಬಬ್ಬು ಗುಡಿ"ಯಲ್ಲಿ ಜುಗರಾಡುತ್ತಿದ್ದ ಜುಗಾರುಖೋರರೆಂದು ತಿಳಿದುಬಂತು. ಈ ಸಂಗತಿಯನ್ನು ಅವರು ಪೋಲೀಸರಿಗೆ ತಿಳುಹಿಸಿ ಜುಗಾರುಖೋರರನ್ನು ಆಗಲೇ ಕೈದುಮಾಡಿಸಿದರು."

ಸ್ವೀಕಾರ ವಿಮರ್ಶೆ.

ಉಡುಪಿಯ ಕಿರಿಯರ ಪ್ರಪಂಚದ ತೊದಲ್ನುಡಿ ಗ್ರಂಥಮಾಲೆಯ ಮೊದಲನುಡಿಯಾದ **ಸ್ವತಂತ್ರ ಜೀವನೋಪಾಯ**ವೆಂಬ ೦—೨—೬ ಪೈ ಕ್ರಯದ ನಾಟಕ ಪುಸ್ತಕವೊಂದು ನಮ್ಮ ಹಸ್ತಗತವಾಗಿದೆ. ಹಳ್ಳಿಯ ಮತ್ತು ಪೇಟೆಯ ಜೀವನದ ಹೋರಾಟವು ಇದರಲ್ಲಿ ವರ್ಣಿತವಾಗಿದೆ. ದಕ್ಷಿಣ ಕನ್ನಡದ ಪ್ರತಿಯೊಬ್ಬನೂ ಇದನ್ನು ಕಂಡು ಮೆಚ್ಚದಿರನು. ತುಳುನಾಡಿನವರಿಗೆ ತಕ್ಕ ಪುಸ್ತಕ. ನವನಾಗರಿಕತನದ ಚಿತ್ರವೂ ಹಳ್ಳಿಯ ಚಿತ್ರವೂ ಸೌಮ್ಯವಾಗಿ ವರ್ಣಿತವಾಗಿವೆ. ಕಿರಿಯರ ಪ್ರಪಂಚವನ್ನು ಎಲ್ಲರೂ ಪ್ರೋತ್ಸಾಹಿಸಬೇಕು.

ಉಡುಪಿಯ ಅನಂತೇಶ್ವರ ಎಲಿಮೆಂಟರಿ ಶಾಲೆಯ ವಿದ್ಯಾರ್ಥಿ ಸಂಘದವರು ಕೈಲಾಸವಾಸಿ ಉಪ್ಪೂರು ಲಕ್ಷ್ಮೀನಾರಾಯಣ ಕಮ್ತಿರವರ ಸ್ಮರಣಾರ್ಥವಾಗಿ ಪ್ರಕಟಿಸಿದ **ಪ್ರಾರ್ಥನೆ** ಎಂಬ ಸುಮನೋಹರವಾದ ಪದ್ಯ ಪುಸ್ತಕವು ಕೈಸೇರಿದೆ. ಇದರ ಬೆಲೆ ೯ ಪೈ. ಎಲ್ಲರೂ ಓದ ತಕ್ಕದಿದೆ. ಶ್ರೀಯುತ ಉಪ್ಪೂರರವರ ಭಾವಚಿತ್ರವೊಂದನ್ನು ಕೊಡಬೇಕಿತ್ತು.

Ambition without patience is only fire-works.

ಪ್ರೋತ್ಸಾಹಿಸಿರಿ! ಪ್ರೋತ್ಸಾಹಿಸಿರಿ!

ಸ್ವದೇಶಿ ಕೈಗಾರಿಕೆಗಳನ್ನು ಪ್ರೋತ್ಸಾಹಿಸಿರಿ!

ಕಿರ್ಲೋಸ್ಕರ್ ಬಂಧುಗಳು, ಲಿಮಿಟೆಡ್

ಕಿರ್ಲೋಸ್ಕರವಾಡಿ.

ಸೋಲ್ ಡಿಸ್ಟ್ರಿಬ್ಯೂಟರ್ಸ್:—

ಮೆಸರ್ಸ್ ಮಾಬೆನ್ ಎಂಡ್ ಸನ್ಸ್,

ಉದಿಯಾವರ, ದ. ಕ.

ನಾವು ಮೇಲಿನ ಕಂಪೆನಿಯಲ್ಲಿ ಸಿದ್ಧವಾಗುವ ಸುಪ್ರಸಿದ್ಧ ಉಕ್ಕಿನ ವ್ಯವಸಾಯ ಸಾಮಾನುಗಳನ್ನೂ ಮನೆ ವ ಆಸ್ಪತ್ರೆಗಳ ಸಕಲ ಫರ್ನಿಚರುಗಳನ್ನೂ ಕುಳುವಾರುಗಳ ಅನುಕೂಲತೆಯನುಸಾರವಾಗಿ ಒದಗಿಸಿಕೊಡುವೆವು. ಹೆಚ್ಚಿನ ಮಾಹಿತಿ ವ ಕೆಟಲಾಗಿನ ಬಗ್ಗೆ—

1. ಬಾಸೆಲ್ ಮಿಶನ್ ಬುಕ್ ಡಿಪೊ, ಮಂಗಳೂರು, ದ. ಕ.
2. ಮಿಸ್ಟರ್ ಕೆ. ರಾಮ ನಾಯಕ್, ಜನರಲ್ ಮರ್ಚಂಟ್, ಕೋರ್ಟು ರೋಡ್, ಕಾಸರಗೋಡು.
3. ಮಿಸ್ಟರ್ ಎಂ. ಸದಾಶಿವರಾವ್, ಸ್ವದೇಶಿ ಪ್ರಚಾರಕ ಸಂಘ, ಪುತ್ತೂರು, ದ. ಕ.
4. ಮಿಸ್ಟರ್ ವಿ. ವಿ. ಶೆಣೈ, ಜನರಲ್ ಮರ್ಚಂಟ್, ಕಾರ್ಕಳ, ದ. ಕ.
5. ದಿ ಉಡುಪಿ ಮಿಶನ್ ಶೋಪ್, ಉಡುಪಿ, ದ. ಕ.
6. ಮಿಸ್ಟರ್ ಬಿ. ಕೃಷ್ಣಪ್ಪ, ದಿ ನ್ಯೂ ಸೈಕಲ್ ಸ್ಟೋರ್ಸ್, ಮೂಡಬಿದ್ರಿ, ದ. ಕ.

ಇವರಿಗೆ ಬರೆದುಕೊಳ್ಳಿರಿ.

ಸೂಚನೆ:— **ಹಲ್ಲಿದ್ದಾಗಲೇ ಕಡಲೆ ತಿನ್ನಿ!!**

ಏಂಜಲ್ಸ್ "ತ್ರಿಫ್ಟ್" ಮತ್ತು "ಜುವೆನಿಲ್" ಕ್ರಮದಮೂಲಕ ನೀವು ದಿನಕ್ಕೊಂದಾಣೆಯನ್ನು ಜೋಕೆ ಇಟ್ಟರೆ ನಿಮ್ಮ ಕುಟುಂಬವು ಸಂರಕ್ಷಿಸಲ್ಪಟ್ಟೀತು.

ಪತ್ರಕಗಳ ಬಗ್ಗೆ—

ಆರೋನ್ ಜಿ. ಮಾಬೆನ್, ಫೆಕ್ಟರಿ ರೆಪ್ರೆಸೆಂಟೇಟಿವ್ ಎಂಡ್ ಇನ್ಶ್ಯೂರೆನ್ಸ್ ಏಜಂಟ್, ಉದಿಯಾವರ.
ಇವರಿಗೆ ಬರೆಯಿರಿ.

Angels' Insurance Company, Ltd., Delhi.

(TIT-BITS.) (ಟಿಟ್-ಬಿಟ್ಸ್.)

ಮೈಸೂರ್ ನರ್ಸಣ್ಣನ ಪಿಟೀಲು!

ನಮಸ್ಕಾರ ರಾಯ್ರೇ ನಮಸ್ಕಾರ. ಗುಡ್ ಮೋನಿಂಗ್ ಮಿಸ್ಟರ್‌ಗಳೇ ಗುಡ್ ಮೊಣಿಂಗ್. ನಾನು ಕಳ್ದ ತಿಂಗಳಲ್ಲಿ ಹೇಳ್ದ ಕೆಲವು ಮಾತುಗಳು ವಾದವನ್ನೆಬ್ಸಿವೆ. ವಾದ ಬೇಡಾ ಸಾರ್ ವಾದ ಬೇಡ! ನಂಗೆ ಇರುವುದೇ ೩॥ ಹಲ್ಲು! ಅದು ಕೂಡಾ ಹಾರ್ಸಿ ಬಿಟ್ಟಾರು, ಪುಣ್ಯಾತ್ಮರು, ಮಂಗ್ಳೂರಿನವ್ರು.

× × × ×

ಮೈಸೂರ್ ನರ್ಸಣ್ಣ ಯಾರು ಅಂತ ಕೆಲವ್ರು ಪ್ರಶ್ನೆ! ಅವನನ್ನು ಕಂಡುಹಿಡೀಬೇಕೂಂತ ಭಾರೀ ಜನ್ರು ಪ್ರಯಾಸ! ಅವನು ನಾನೇ ಸ್ವಾಮಿ ನಾನೇ! ನೋಡಿ ನಿಮ್ಗೆ ಕಾಣುವುದಿಲ್ವೇ? ನಿಮ್ಮಂತೆ ಎರಡು ಕೈ, ಎರಡು ಕಾಲು, ಒಂದು ಮೂಗು ಇದೆ. ಮಾತ್ರ ಹಲ್ಲು ೩॥! ನಾನು ದೊಡ್ಡ 'ಪ್ರೊಡಿಜಿ' ಅಲ್ವೇ?

× × × ×

ಬಡವ್ರ ಬಂಧು ಒಂದು ಕಥೇಲಿ ಕಾರ್ಕಳದ ಶ್ರೀ ಗುಮ್ಮಟ ದೇವ್ರಿಗೆ ಉಪಮೆ ಕೊಟ್ಟುದಕ್ಕೆ ಹೊಸನಗ್ರದ ಶ್ರೀ। ಎಸ್. ಪಿ. ಶೆಟ್ರು ಕಿಡಿ ಕಿಡಿ ಅಗೀದಾರೆ. ಸ್ವಾಮಿ, ಶೆಟ್ರೇ, ನಿಮ್ಮ ಮತವೇ ನಮ್ಮ ಮತ. ನಾನೂಒಂದೇ, ನೀವೂ ಒಂದೇ, ಅವರೂ ಒಂದೇ ಶ್ರೀ। ಅಡಿಗ್ರು ನಿಮ್ಮ ಮತವನ್ನು ದೂರ್ಲಿಲ್ಲ. ನಿಮ್ಮ ದೇವ್ರಿಗೆ ಹಾಳು ಬಯಸ್ಲಿಲ್ಲ. ಅದ್ರಿಂದ ಬೇಸ್ರಪಡ್ಬೇಡ್ರಿ. ಅಡಿಗ್ರು ನಿಮ್ಗೆ ತಕ್ಕ ಉತ್ರ ಕೊಡ್ಲಿಕ್ಕೂ ಸಾಕು. ಪ್ರೀತಿ ತುಂಬಾ ಇರಲಿ. ಇಂತಿ ತಮ್ಮ......

× × × ×

ಕಳ್ದ ತಿಂಗ್ಳಲ್ಲಿ ನಮ್ಮ ಮುನಿಸಿಪಾಲ್ಟಿಯ ಹತ್ರ ಕೆಲವು ತೋಟಿಗಳಿಗೆ(?) ಒಬ್ರು ಪೆಟ್ಟು ಕೊಟ್ಟಿದ್ದಾರಂತೆ. ಹೌದೋ ಸಾಮಿ, ಬಡವ್ರಿಗೆ ಹೊಡೀಬೇಡಿ! ಹೊಡೀಬೇಡಿ!! ಹಾಗು ಹೊಡೆವುದಾದ್ರೆ ಸರೀ ಹೊಡೆದು ಅವರನ್ನು ಕೊಂದ್ಬಿಡಿ! ವಿನಾ ಒದೇ ಬೇಡಿ, ಬಡೀ ಬೇಡಿ. ನರ್ಳಿ ನರ್ಳಿ ಆಸ್ಪತ್ರೇಲಿ ಅವ್ರು ಸಾಯುವ್ದು ಬೇಡ.

× × × ×

ನಿಮ್ಗೆ ದೊಡ್ಡವ್ರಿಗೆ ಬಡವ್ರ ಮೇಲೆ ಒಂದಿಷ್ಟು ಕರುಣೇ ಇಲ್ಲಲ್ಲಾ. ಅದೇನ್ರಿ? ನಿಮ್ಮ ಮನೇಲಿ ಲಚಿಮಿ ಬಂದು ಕುಳೀತೀದಾಳೆ ಎಂದಾ? ಬಡವ್ರ ಎದೇಲಿ ಆರಿದ್ದಾರೆ ತಿಳಿದಿರ್ರುವದೇ ಲಚಿಮಿ ಗಂಡ ಇದ್ದಾನೆ. ಆ ದೇವ್ರು ಕೋಪಗೊಂಡಾನು ಗೊಂತಾಯಿತೇ?

× × × ×

ಈ ಸಲ ನನ್ನ ಶಂಖ ಮುತ್ತು ತಮ್ಟೆ ಏನು ಇಲ್ಲಾ? ಎಂತ ನೀವು ಕೇಳಬಹುದು. ಅಯ್ಯೋ ರಾಜಾ ಅದ್ರ ಕತೆ ಭಾರೀ ಉಂಟು! ಮೊನ್ನೆ ನಿಮ್ಮ ಪೋಲೀಸ್ ಆಫೀಸ್ನ ಹತ್ರ ಮಕನಿನ ಬಳಿ ನನ್ನ ಶಂಖ ಮುತ್ತು ತಮ್ಟೆಯನ್ನು ತಲೇ ಅಡೀ ಇಟ್ಟು ಮಲಗಿದ್ದೆ ದೇವ್ರೆ, ಹೇಳ್ಲಿಕ್ಕೆ ದುಃಖ ಆಗ್ತೆ—ಅಳೂ ಬರ್ತೇ—ಹೂಂ, ಹೂಂ.

× × × ×

ನಂಗೆ ಭಾರೀ ನಿದ್ದೆ ಬಿತ್ತು. ಬೆಳ್ಗೆ ಎದ್ದು ನೋಡ್ತಿನಿ, ನನ್ನ ಮೈಯ ವಸ್ತ್ರ (ಲಂಗೋಟಿ ಕೂಡಾ) ಶಂಖ, ಮುಂಡಾಸು ತಮ್ಟೆ ಎಲ್ಲಾ ಯಾರೋ ಮಂಗ್ಳೂರ್ ಪುಣ್ಯಾತ್ಮ್ರು ಎತ್ತಿಕೊಂಡು ಹೋಗಿದ್ರು ದೇವ್ರೆ. ನಂಗೆ ದುಃಖ ಬರ್ತೆ!—ಹೂಂ. ಹೂಂ. ಮತ್ತೆ ಹೇಗೋ ದೇವ್ರು ಪುಣ್ಯ ಅಂತಾ ಹೇಳಿ, ನಾನು ಕಣ್ಮುಚ್ಚಿ ಜೀವ್ದ ಮೇಲೆ ನಡ್ದು ಮನೇನು ಮುಟ್ಟಿದೆ. ಅಯ್ಯೋ! ನನ್ನ ಎರಡ್ನೇ ಹೆಂಡ್ತಿ ಎಷ್ಟು ಹೊಡ್ದಳಯ್ಯಾ ನಂಗೆ! ನಾಚಿಕೆ ಆಗ್ತದೆ ಹೇಳೋಕೆ. ಮೊನ್ನೆ ಒಂದು ಪಿಟಿಲು ತೆಗೆದುಕೊಂಡಿದ್ದೇನೆ. ರಾಜ ಪೀಂ ಪೀಂ ಪಿಟಿಲು.

× × × ×

ಕೆಲವು ಇಗರ್ಜಿಗಳ ಎದ್ರು ಹಂದಿ ಮಾಂಸ ಮಾರ್ತಾರಲ್ಲಾ ರಾಜಾ! ಈ ಅಭ್ಯಾಸವನ್ನು ನೀವು ಏಕೆ ನಿಲ್ಸುವುದಿಲ್ಲ? ಇಂಗ್ರೀಜಿಯೊಳಗೆ "ದೇವ್ರೆ ನಮ್ಮ ರೊಟ್ಟಿ ನಮಗೆ ಕೊಡು" ಎಂತ ಹೇಳಿ ಪ್ರಾರ್ಥನೆ ಮಾಡ್ದ ಮೇಲೆ, ಹೊರ್ಗೆ ಬಂದು ಈ ಅನ್ಯಾಯವನ್ನು ನೋಡ್ತೀರಾ?

ಅದೇನ್ರಿ ಈಗ ನಮ್ಮ ಮಾರ್ಗಗಳು ಸಮ ಮಾಡಲ್ಪಡುವಾಗ ಕಲ್ಲು ರಾಶಿ ಮಾಡಿದ್ರೆ ಆ ಕಲ್ಲುಗಳ ರಾಶಿ ಬಳಿ ಡೇಂಜರ್ ಲ್ಯಾಟ್ ಇಡುವ ಅಭ್ಯಾಸ ಇಲ್ವೇ? ರಿಟ್ರೆಂಚ್‌ಮೆಂಟ್ ಹೀಗೂ ಉಂಟಾ?

× × × ×

ನಮ್ಮೂರಲ್ಲಿ ತುಂಬಾ ಇಲೆಕ್ಟ್ರಿಕ್ ಲೈಟ್ ಉಂಟು. ನಿಮ್ಮೂರಲ್ಲಿ ಅದು ಆಗ್ತದೆ; ಅದೇನ್ರಿ? ನಿಮ್ಮ ಮಂಗ್ಳೂರಲ್ಲಿನ ಇಲೆಕ್ಟ್ರಿಕ್ ಕಂಪೆನಿಯಲ್ಲಿ ಕೆಲಸಕ್ಕೆ ಇರ್ರುದು ಮಳಿಯಾಳಿಯವರೂ ಕ್ರಿಸ್ತಾನ್ರೂ. ಅಲ್ಲ; ಅವ್ರಿಗೆ ಕೆಲ್ಸ ಕೊಡಬಾರ್ದು ಎಂತ ಅಲ್ಲ. ಬೇರೆ ಜಾತಿ ಅವರಿಗೆ ಕಾಣೋದೇ ಇಲ್ವಾ?

× × × ×

ಮಿ। ಜಾರ್ಜ್ ಹರ್ಬರ್ಟ್ರೆ ನಿಮ್ಗೆ ಒಬ್ರು ಪ್ರಶ್ನೆ ಹಾಕಿದ್ದಾರೆ. (೧೦ನೇ ಪುಟ ನೋಡ್ರಿ) ಪ್ರಿಯ ಹರ್ಬರ್ಟ್ರೇ, ಇಂಗ್ಲಿಷಿನಲ್ಲಿ ಜವಾಬು ಕೊಡುತ್ತೀರಾ? ಕನ್ನಡ್ದಲ್ಲೋ?

× × × ×

ಶಿವಭಕ್ತಿ ಯೋಗ ಸಂಘದ ತರುಣ್ರು ನವಕ್ರಾಂತಿಯನ್ನುತ್ಪನ್ನ ಮಾಡಿದ್ದಾರೆಂದು ತಿಳಿದುಬರ್ತದೆ! ತರುಣ್ರೇ, ನಿಮ್ಮ ನರ ಎಷ್ಟರ ತನ್ಕ ಗಟ್ಟಿ ಇದೆಯೋ, ಅಷ್ಟ್ರ ತನ್ಕ ನಿಮ್ಮ ಈ ಉತ್ಕ್ರಾಂತಿ. ಮತ್ತೆ ಅದಿಲ್ಲ! ದೊಡ್ಡವ್ರಾದ್ರೋ ತಮ್ಮ ತಮ್ಮ ಮಾಹಿತಿಯಿಂದ ಎಲ್ಲವನ್ನೂ ಅನುಭವಿಸ್ಸುರು ಗೊತ್ತಿರ್ಲಿ! ತರುಣ್ರು ಅದ್ರಲ್ಲೂ—ಲ್ಲವರ ತರುಣ್ರು ಆರಂಭಶೂರರೆಂಬ ಮಾತು ನಿಮ್ಗೆ ತಟ್ಟದಿರ್ಲಿ!

× × × ×

ಬಡವ್ರ ಬಂಧೂನಲ್ಲಿ ಈ ಸಲ ಒಂದು "ಹೂಮಾಲೆ" ಬಂದಿದೆ. ಅದನ್ನು ಸ್ವೀಕರ್ಸುವಾಗ "ಮೈಸೂರು ನರ್ಸಣ್ಣ"ನನ್ನು ಮರ್‍ಯಬಾರ್ದೆಂದು ನನ್ನ ಅರ್ಜಿ. ಅದನ್ನು ಕೈಗೆ ತೆಗೆದುಕೊಳ್ಳುವಾಗ್ಲೇ "ಮೈಸೂರು ನರ್ಸಣ್ಣಾ ಕೀ ಜೈ" ಎಂದು ಹೇಳ್ಬಿಡಿರಿ. ಜೋಕೆ!

× × × ×

ಮುಂಬಾಯಿಯ ಶಿರಿಯಾನ್ ಎಂಬ ಪುಣ್ಯಾತ್ಮರೊಬ್ರು ಕೆ. ಬಿ. ರಾಮರಾವ್ ಎಂಬವರ ಹೆಸ್ರಿನಿಂದ ಹತ್ತಿಪ್ಪತ್ತು ಪತ್ರಿಕೆಗಳಿಗೆ ಓರ್ಡರು ಕೊಟ್ಟು ವಿ. ಪಿ. ತರ್ಸಿದರಂತೆ. ಈ ಸಂಗ್ತಿ ರಾಮರಾಯ್ರಿಗೆ ಗೊತ್ತಿದ್ದಿಲ್ಲವಂತೆ. ಅವ್ರು ತನಗೆ ಬಂದ ವಿ. ಪಿ. ಗಳನ್ನು ಹಿಂದೆ ಬಿಟ್ರಂತೆ—ಮಿಸ್ಟರ್ ಶಿರಿಯಾನರೇ, ನಿಮ್ಗೀ ಕೆಲ್ಸವೇಕೆ? ನಿಮ್ಮ "ವೀರ ಕನ್ನಡಿಗ" ಎಂಬ ಲೇಖನಕ್ಕೆ ಬೆಂಕಿಕಡ್ಡಿಯ ದೋಸ್ತಿ ಮಾಡ್ಸಬಹುದಿತ್ತಲ್ಲ?

× × × ×

ಬೇರೆಯವರ ಹೆಸ್ರೀಲೀ ವಿ. ಪಿ. ತರ್ಸಲು ಪತ್ರಾ ಬರೆದ ನಿಮ್ಮ ಲೇಖನಿಯು ಏಕೆ ಮುರಿದುಬೀಳಲಿಲ್ಲ? ಅನೇಕ ಪುಸ್ತಕ ವ್ಯಾಪಾರಿಗಳಿಗೂ ನೀವು ನಷ್ಟ ಮಾಡ್ಸಿದಿರಲ್ಲಾ? ಮುಂಬಾಯಿಯಲ್ಲಿ ಹುಚ್ಚರಾಸ್ಪತ್ರಿ ಇಲ್ವೇ?

× × × ×

ಒಂದು ಪದಾ ಹೆಳ್ಬೇಕೇ?

ನಾ ನಾ ನನ್ನಾನೀ। ನ ನ ನ ನ ನನ್ನಾನೀ।

ನಾನಾ ನನ್ನಾನೀ॥ ಮುನ್ಸಿಪಾಲ್ಟಿ ನನ್ನಾನೀ। ಅದ್ರ ರೂಲ್ಸ್ ನನ್ನಾನೀ। ನಾನಾ ನನ್ನಾನಿ। ಶಾಲೆಗಳಲಿ ನನ್ನಾನಿ। ಮುಂಜಾನೆ ನನ್ನಾನಿ। ಎಂಟು ಗಂಟೆಗೆ ನನ್ನಾನಿ। ಪಾಠ ಶುರು ನನ್ನಾನಿ। ಮಕ್ಳುಮರಿಗ್ಳು ನನ್ನಾನಿ। ತಂಗಳ ಉಂಡು ನನ್ನಾನಿ। ಶಾಲ್ಗೆ ಹೋಗ್ತು ನನ್ನಾನಿ। ಮಧ್ಯಾಹ್ನ ನನ್ನಾನಿ। ನಾನಾ ನನ್ನಾನಿ। ಮನ್ಗೆ ಹೋಗ್ದು ನನ್ನಾನಿ। ಎರಡುಘಂಟೆಗೆ ನನ್ನಾನಿ ಮಕ್ಳ ಹೊಟ್ಟೆಗೆ ನನ್ನಾನಿ। ಪೆಟ್ಟು ಕೊಡುವುದೆ? ನನ್ನಾನಿ। ಇಂತ ರೂಲ್ಸು ನನ್ನಾನಿ। ಮುನ್ಸಿಪಾಲ್ಟಿ ನನ್ನಾನಿ। ತೆಗೇಬೇಕು ನನ್ನಾನಿ। ನಾನಾ ನನ್ನಾನಿ। ಕಾಸು ಬೇಕೊ ನನ್ನಾನಿ। ಟೀಕ್ಸು ಹೆಚ್ಚಿರಿ ನನ್ನಾನಿ। ಮಕ್ಕಳ ಹೊಟ್ಟೆ ನನ್ನಾನಿ। ತಂಪು ಇರ್ಲಿ ನನ್ನಾನಿ। ಚೇರ್‌ಮೇನ್ರೆ ನನ್ನಾನಿ। ದಮ್ಮ ದಮಯ ನನ್ನಾನಿ। ಈ ರೂಲ್ಸು ನನ್ನಾನಿ। ಬೇಡ ಕೇಳಿ ನನ್ನಾನಿ। ನಾನಾ ನನ್ನಾನಿ। ನಮಸ್ಕಾರ ನನ್ನಾನಿ। ಹೊಟ್ಟೆಯೊಳ್ಗೆ ನನ್ನಾನಿ। ತಲೆ ತಿರುಗ್ತೆ ನನ್ನಾನಿ। ಸಾಕು ಇಲ್ಲಿ ನನ್ನಾನಿ। ನಾನಾ ನನ್ನಾನಿ।

ಬಿಚ್ಚುಗರಿಗೆ ಬೆಳ್ಳಿಯ ಪದಕ!



ಬಿಚ್ಚುಗರಿಗೆ ಬೆಳ್ಳಿಯ ಪದಕ!

(ಒಗಟುಗಾರರು:–ಶ್ರೀ. ಎನ್. ಸುಂದರರಾವ್, ಮಂಗಳೂರು.)

ಬಿಡಿಸಿದ ಪ್ರತಿಯೊಬ್ಬನಿಗೊಂದು ಉತ್ತಮ ಪುಸ್ತಕ! **ಜ್ಞಾನಸಂಪಾದನೆ ಮಾಡಿರಿ! ಬಿಚ್ಚದೆ ಬಿಡಬೇಡಿರಿ!!**

ಎಡದಿಂದ ಬಲಕ್ಕೆ.

೧, ೨, ೩ ತಾವರೆ.
೪, ೫ ಜಂಬುಕ.
೮, ೯ ಸುತ.
೧೩, ೧೭ ಕೈ.
೧೮, ೧೯ ಕಾಡು.
೨೦, ೨೧, ೨೨ ಪತಿ.
೬, ೭ ಮಿತ್ರ.
೧೦, ೧೧ ಕರಿ.
೧೬, ೧೫ ಭರತಖಂಡದಲ್ಲಿ ಆಗಿ ಹೋದ ಒಬ್ಬ ಪ್ರಸಿದ್ಧ ಚಕ್ರವರ್ತಿ.
೨೩, ೨೪ ಗಾಳಿ.
೨೫, ೨೬, ೨೭ ವಾರಿಧಿ.

		1	2	3		
	4	5	■	6	7	
8	9	■	28	■	10	11
12	■	25	26	27	■	14
13	17	■	29	■	16	15
	18	19	■	23	24	
		20	21	22		

ಮೇಲಿಂದ ಕೆಳಕ್ಕೆ.

೧, ೫ ಸಾಧುಪ್ರಾಣಿಗಳ ಲ್ಲೊಂದು.
೪, ೮ ಆಭರಣ.
೮, ೧೨, ೧೩ ದುಃಖ.
೧೭, ೧೮ ಶಬ್ದ.
೧೯, ೨೦ ಮಾನವ.
೨೩, ೨೨ ಸಿರಿ.
೧೧, ೧೪, ೧೫ ಕಲಹ.
೭, ೧೦ ಪಕ್ಷಿ.
೩, ೬ ಸೇವಕ.
೧೬, ೨೪ ಹೊಸ.

ಸೂಚನೆ:—ಒಗಟಿನ ಉತ್ತರವನ್ನು ಸರಿಯಾಗಿ ಬಿಚ್ಚಿದ ಪ್ರತಿಯೊಬ್ಬರಿಗೂ ನಾಲ್ಕಾಣೆ ಕ್ರಯದ ಇಬ್ಬರು ವೀರರ ಚರಿತ್ರೆ ಪುಸ್ತಕ ಒಂದೊಂದನ್ನು ಬಹುಮಾನಿಸಲಾಗುವುದಲ್ಲದೆ, ಚಂದಾದಾರರ ಪೈಕಿ ಅಥವಾ ಈಗಲೇ ಚಂದಾದಾರರಾಗಿ ಉತ್ತರ ಕಳುಹಿಸುವವರೊಳಗೆ ಸೋಡ್ತಿ ಎತ್ತಲು ಸೋಡ್ತಿ ಬಂದವರಿಗೆ ಅವರ ಹೆಸರು ಕೆತ್ತಿಸಿದ ಒಂದು ಬೆಳ್ಳಿಯ ಪದಕವನ್ನು ಬಹುಮಾನಿಸಲಾಗುವುದು. ಉತ್ತರವನ್ನು ಒಂದಾಣೆಯ ಚೀಟು ಸಮೇತ ಸಪ್ಟಂಬರ ೧೦ರೊಳಗೆ "ಬಡವರ ಬಂಧು" ಆಫೀಸಿಗೆ ಕಳುಹಿಸತಕ್ಕದ್ದು.

ಮೇ ತಿಂಗಳ ಪ್ರಥಮ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಒಗಟಿಗೆ ಸರಿಯಾಗಿ ಉತ್ತರ ಕೊಟ್ಟವರ ಹೆಸರುಗಳು.

ಶ್ರೀಗಳಾದ ೧. ಬಿ. ಬಾಬುರಾವ್, ವಿದ್ಯಾರ್ಥಿ, ಗವರ್ನಮೆಂಟ್ ಕೊಲೇಜ್, ಮಂಗಳೂರು. ೨. ಎಸ್. ಎ. ವಾಸುದೇವನಾಯಕ, ಕೊಪ್ಪ. ೩. ಕೆ. ಚೆನ್ನಪ್ಪ, ಒನರೆರಿ ಸೆಕ್ರೆಟರಿ, ಜೆ. ಏಚ್. ಆರ್. ಆರ್. ಚಿಕ್ಕಬಲ್ಲಾಪುರ. ೪. ಕೆ ಕೃಷ್ಣರಾವ್, ಉರ್ವ. ೫. ಪಿ. ಎಸ್. ಕೃಷ್ಣ, ವಿದ್ಯಾರ್ಥಿ, ಪಡುಪಣಂಬೂರು. ೬. ಪಿ. ಬಿ. ಪಕೀರಪ್ಪ, ಮಾಸ್ಟರ್, ಹಳೆಯಂಗಡಿ, ೭. ಎಮ್. ಜಗತ್‌ಪಾಲ, ಮೂಲ್ಕಿ ಅರಮನೆ, ಹಳೆಯಂಗಡಿ. ೮. ಎಮ್. ಎಸ್. ದಾಸಪ್ಪ, ಮಾಸ್ಟರ್, ಪಡುಪಣಂಬೂರು. ೯. ಪಿ. ಚೀಂಕ್ರ ದೇವಡಿಗ, [illegible] ೧೦. ಎಮ್. ಕೆ. ಎಲ್ಲಪ್ಪ, ಮಾಸ್ಟರ್, ಪಡುಪಣಂಬೂರು. ೧೧. ಎಚ್. ರಾಘವೇಂದ್ರ ಕಾಮತ್, ಹಳೆಯಂಗಡಿ. ೧೨. ಕೇಶವನಾಯಕ ಉಳ್ಳಾಲ. ೧೩. [illegible] ಎಮ್. ರವಿವರ್ಮ, ಅಡ್ಯಾರು. ೧೫. ಎ. ಲೋಕಯ್ಯ, ಸಿ. ಮೇಸ್ತ್ರಿ, ಮಂಗಳೂರು. ೧೬. ಕಾಡಿಪಟ್ಣ ಕೆ. ಟಿ. ಕರ್ಕೇರ, ಮುಂಬಾಯಿ. ೧೭. ಆರ್. ಬಿ. [illegible]ನ್, ಕಾಪು. ೧೮. ಬಿ. ಕೆ. ಪಾಂಡುರಂಗ ಪೈ, ಬ್ರಹ್ಮಾವರ. ೧೯. ಆರ್. ಎಲ್. ಪೈ, ಸ್ನೇಹಕೂಟ, ಹೊಸಂಗಡಿ. ೨೦. ಜಿ. ಗಣಪತಿ ನಾಯಕ್, ಮಂಗಲ್ಪಾಡಿ ೨೧. ವಿ. ಎನ್. ಬೋಳಾರ್, ಉಡ್ಪಿ. ೨೨. ಪಿ. ಸಿ. ಸೆಟ್ಟಿ, ಜೈನ್, ಪಾಣೆಮಂಗಳೂರು. ೨೩. ಪಿ. ವಿ. ವಾಸುದೇವ ನಾಯಕ್, ಪಾಣೆಮಂಗಳೂರು. ೨೪. ಕಿಲ್ಪಾಡಿ ಕೃಷ್ಣರಾವ್. ಅತ್ತಾವರ. ೨೫. ಎಸ್. ಸುಂದರರಾವ್, ಮಂಗಳೂರು. ೨೬. ಎನ್. ಟಿ. ಸುವರ್ಣ, ಮಂಗಳೂರು. ೨೭. ಎ. ಆರ್. ಸಾಲಿಯಾನ್ ಕಾರ್, ಮಂಗಳೂರು. ೨೮. ದೇವಪ್ಪ ಪುತ್ರನ್, ಬೋಳಾರ.

೧. ರಾಧಾಬಾಯಿ, ಮಂಗಳೂರು. ೨. ಬಿ ಲಕ್ಷ್ಮೀಬಾಯಿ, ಮುಂಬಾಯಿ. ೩. ಕಲ್ಯಾಣಿ. ಎಮ್, ಮಂಗಳೂರು

ಸೋಡ್ತಿ ತೆಗೆಯಲಾಗಿ ಮೊದಲನೆಯ ಬಹುಮಾನವಾದ "ರಾತ್ರಿ ಚುಕ್ಕಿ ಹಗಲು ಚುಕ್ಕಿ" ಎಂಬ ಉತ್ತಮ ಪತ್ತೇದಾರಿ ಕಥೆ ಪುಸ್ತಕವು ಮುಂಬಾಯಿ (೧೬ನೇ ನಂಬ್ರ) ಶ್ರೀ. ಕರ್ಕೇರರಿಗೂ, ಎರಡನೇಯ ಬಹುಮಾನವಾದ "ಸಮುದ್ರ ಕುಮಾರಿ" ಎಂಬ ಗ್ರಂಥವು (೨೧ನೇ ನಂಬ್ರ) ಉಡುಪಿಯ ಶ್ರೀ. ವಿ. ಎನ್. ಬೋಳಾರ್, ಇವರಿಗೂ ಸಿಕ್ಕಿದೆ. ಸಂ. ಬ. ಬ.

Jump at your chance, for it won't jump at you.

ವರ್ತಮಾನ ತರಂಗ.

ಒಳದೇಶ.

—ಮದ್ರಾಸಿನಲ್ಲಿ ೪ ಮಂದಿ ತರುಣಿಯರನ್ನು ವೇಶ್ಯಾವೃತ್ತಿಯಲ್ಲಿಟ್ಟುಕೊಂಡು ದಿನಹರಣೆಮಾಡುತ್ತಿದ್ದ ಲಕ್ಷ್ಮಿ ಅಮ್ಮಳ್ ಎಂಬವಳನ್ನು ಸೆರೆಹಿಡಿದಿದ್ದಾರೆ.

—ಮೇವಾಡ ಸಂಸ್ಥಾನದ ರಾಜಧಾನಿಯಾಗಿರುವ ಉದಯಪುರದಲ್ಲಿ ತೀರ್ವೆಯನ್ನು ಹೆಚ್ಚಿಸಿದುದಕ್ಕಾಗಿ ಜನರು ದಂಗೆಯೆದ್ದು ರಾಜನ ಮನೆಗೆ ನುಗ್ಗಿದರು. ಗುಂಡ ಹಾರಿಸಲಾಗಿ ೮೦ ಜನರು ಘಾಯಗೊಂಡರು. ಸತ್ತ ಸುದ್ದಿ ಬಂದಿಲ್ಲ.

—ಅಜಮೀರದ ಬಳಿ ಮೇವಾಗರದ ಒಂದು ಗನಿಯಲ್ಲಿ ಕೆಲವರು ಕೆಲಸ ಮಾಡುತ್ತಿರುವಾಗ ಗನಿಯು ಕುಸಿದುಬಿದ್ದು ೬ ಮಂದಿಗಳು ಮಡಿದರು.

—ಕರಾಚಿಗೂ ಮದ್ರಾಸಿಗೂ ಮಧ್ಯೆ ವಿಮಾನ ಚಲಾವಣೆಯನ್ನು ಸ್ಥಾಪಿಸುವುದಾಗಿ ವ್ಯವಸ್ಥೆಯಾಗಿದೆ.

—ಮಿಡ್ನಾಪುರದಲ್ಲಿ ಮೇಜಿಸ್ಟ್ರೇಟರನ್ನು ಕೊಂದ ಪ್ರದ್ಯೋತ ಕುಮಾರನೆಂಬವನಿಗೆ ಪಾಶಿಶಿಕ್ಷೆ ವಿಧಿಸಲಾಗಿದೆ.

—ಗಾಂಧಿಜೀಯವರ ಶಿಷ್ಯರಾದ ಮೀರಾಬೆನ್ (ಮಿಸ್ ಸ್ಲೇಡ್) ಇವರಿಗೆ ಮುಂಬಾಯಿಯಿಂದ ಹೊರಗೆ ಹೋಗಬೇಕೆಂದು ಅಪ್ಪಣೆಕೊಟ್ಟರು. ಅವರು ಸರಣಕ್ಕೆ ಹೋಗಲು ಅಲ್ಲಿಯವರೂ ಅವರನ್ನೂ ಹೊರಗೆಮಾಡಿದರು. ಇನ್ನೆಲ್ಲಿಗೆ?

—ಜುಲಾಯಿ ೧೫ರೊಳಗೆ ಮುಂಬಾಯಿಯಿಂದ ಇಂಗ್ಲಾಂಡಿಗೆ ೭ ಕೋಟಿ ರೂಪಾಯಿ ಭಂಗಾರವು ಸ್ಟೀಮರಿನಲ್ಲಿ ಸೀದಾ ತೇಲಾಡಿಕೊಂಡು ಹೋಯಿತು. ಕಾಶಿ ಯಾತ್ರೆಯಂತೆ ಭಂಗಾರ ಯಾತ್ರೆ!

—ಕಾಶ್ಮೀರದಲ್ಲಿ ಹಿಂದೂ ಮುಸಲ್ಮಾನ ವೈಷಮ್ಯವು ತಲೆದೋರಿದೆ. ಹಿಂದೂಗಳು ತಮ್ಮ ಮುಂದಾಳುವಾದ ಸರ್ದಾರ್ ಮಹೀಂದ್ರ ಸಿಂಘರೆಂಬವರನ್ನು ಸರಕಾರವು ಸೆರೆಯಿಂದ ಬಿಡಬೇಕೆಂದು ಸತ್ಯಾಗ್ರಹಮಾಡಿದ್ದಾರೆ.

—ಮುಂಬಾಯಿಯ ಗಲಭೆಯು ಸರ್ವಶಾಂತವಾಗಿದೆ. ಮೊದಲಿನೆರಡು ಗಲಭೆಗಳಲ್ಲಿ ಭಾಗವಹಿಸಿದವರ ವಿಚಾರಣೆಯು ನಡೆಯುತ್ತಿದೆ.

—ಕಲ್ಕತ್ತದ ಮೋತಿ ಗಲ್ಲಿಯ ಒಂದು ಮನೆಯಲ್ಲಿ ಪ್ರೇತಬಾಧೆಯುಂಟೆಂದು ಹಿಂದೂಗಳು ಅದನ್ನು ಬಿಟ್ಟರು. ಒಂದು ಆಂಗ್ಲೋ ಇಂಡಿಯನ್ ಕುಟುಂಬವು ಅದರಲ್ಲಿ ವಾಸಿಸಿತು. ಒಂದು ಕಪ್ಪಗಿನ ಸ್ತ್ರೀಪ್ರೇತವು ರಾತ್ರಿಯಲ್ಲಿ ಅವರಿಗೂ ಉಪದ್ರವ ಕೊಟ್ಟಿತು. ಮಕ್ಕಳನ್ನು ಹಾಸಿಗೆಯಿಂದ ಎಳೆದೊಯ್ಯಿತು. ಯಜಮಾನನಿಗೂ ಹೊಡೆಯಿತು. ಅವರು ಈಗ ಮನೆಯನ್ನು ಬಿಡುವುದರಲ್ಲಿರುವರು.

—ಮುಂಬಾಯಿಯ ಪ್ರೆಸಿಡೆನ್ಸಿ ಮೆಜಿಸ್ಟ್ರೇಟರ ಬಂಗಲೆಗೆ ಒಬ್ಬ ಮುಸಲ್ಮಾನನು ಹೋದನು. ಅವನನ್ನು ಜಪ್ತಿಮಾಡಲು ಒಂದು ದೊಡ್ಡ ಚೂರಿಯು ಸಿಕ್ಕಿತಂತೆ.

—ಮಿಮಿಸಿಂಗಿನಲ್ಲಿ ರಾತ್ರೆ ಸಮಯ ಎಂಟು ಜನರು ಒಂದು ದೋಣಿಯಲ್ಲಿ ಕುಳಿತು ಧಲೇಶ್ವರಿ ನದಿಯನ್ನು ದಾಟುತ್ತಿದ್ದಾಗ ಬಿರುಸಾದ ಗಾಳಿ ಬೀಸಿ ಎಲ್ಲರೂ ನೀರಿಗೆ ಬಿದ್ದು ಮುಳುಗಿ ಮಡಿದರು.

—ಮಿಡ್ನಾಪುರ ಮೆಜಿಸ್ಟ್ರೇಟರ ಕೊಲೆಗಾಗಿ ಭೂತನಾಥನೆಂಬವನನ್ನು ಹುಡುಕುತ್ತಿದ್ದರು. ಈಗ ಸಿಕ್ಕಿಬಿದ್ದಿರುವನು.

—ಲಾಹೋರಿನಲ್ಲಿ ಮುಕ್ತಾರ್ ಎಂಬ ಹಳೇ ಪೋಲೀಸನೊಬ್ಬನು ಡಿಪ್ಯೂಟಿ ಸುಪರಿಂಟೆಂಡೆಂಟರನ್ನು ಕ್ಷೌರಕತ್ತಿಯಿಂದ ತಿವಿಯಲು ಯತ್ನಿಸಿದನು. ಕಾರಣವೇನೋ!

—ಸರ್ಗೋಡ ಎಂಬಲ್ಲಿ ಒಬ್ಬ ತರುಣನು ತನ್ನ ತಾಯಿಯ ೬೦೦೦ ರೂಪಾಕ್ರಯ ಬಾಳುವ ಆಭರಣಗಳನ್ನು ಕದ್ದೊಯ್ದು ಅವನ್ನು ಒಬ್ಬ ವೇಶ್ಯೆಗೆ ಕೊಟ್ಟು ಸ್ವಲ್ಪ ಸಮಯದಲ್ಲಿ ಪಾಪಾರಿಯಾಗಿ ರೈಲಿನಡಿಯಲ್ಲಿ ಬಿದ್ದು ಪ್ರಾಣಹತ್ಯೆಮಾಡಿಕೊಂಡನು.

—ಶ್ರೀ. ಸುಭಾಸಚಂದ್ರ ಭೋಸರು ದೇಹದಲ್ಲಿ ಬಹಳ ಕ್ಷೀಣವಾಗಿದ್ದು ಅವರನ್ನು ಎಕ್ಸ್‌ರೇ ಮೂಲಕ ಮದ್ರಾಸಿನಲ್ಲಿ ಪರೀಕ್ಷೆಮಾಡಿದರು.

ವಿದೇ

—ಚೀನಾ ದೇಶದಲ್ಲಿ ನೆರಯಾ
ಯಾಗದಂತೆ ಅಲ್ಲಿಯ ನದಿಗೆ ೩ ಸಾ
ಮೈಲು ಉದ್ದದ ಗೋಡೆಯನ್ನು ಒ
೧,೪೦೦,೦೦೦ ಜನರು ಕೂಡಿ ಕಟ್ಟಿದ

—ಬ್ರಿಟಿಷರಿಗೂ ಅಯರ್‌ಲೆಂಡಿನವರಿಗೂ ಭೂಕಂದಾಯದ ಕುರಿತು ಚ
ನಡೆಯಿತು. ಅಯರ್‌ಲೇಂಡಿನವರು ತಾವು ಬ್ರಿಟಿಷರಿಗೆ ಬಗ್ಗೆನೆಂದರು.

ಪತ್ರವ್ಯವಹಾರ— ಲೇಖಕರ ಅಭಿಪ್ರಾಯಕ್ಕೆ ನಾವು ಜವಾಬ್ದಾರರಲ್ಲ. ಸಂ. ಬ.

ಮಿಸ್ಟರ್ ಹರ್ಬರ್ಟರಿಗೆ ಕೆಲವು ಪ್ರಶ್ನೆಗಳು.

೧. 'ಮಕ್ಕಳು' ಸ್ಯಾಕಲನ್ನು ಎಲ್ಲಿ ಕಲಿಯಬಹುದು?

೨. ಮೈದಾನಿನಲ್ಲಿ ಕಲಿಯಬಾರದಾಗಿದ್ದರೆ, ಮಾರ್ಗಗಳಲ್ಲಂತೂ ಅಸಾಧ್ಯವಾದ್ದರಿ
ಮುನಿಸಿಪಾಲಿಟಿಯು ಸ್ಯಾಕಲ್ ಕಲಿಯಲು ಪ್ರತ್ಯೇಕ ಸ್ಥಳವೊಂದನ್ನು ವಿ
ಲಾಗಿಡಬಹುದೆಂದು ನೀವು ಅಭಿಪ್ರಾಯಪಡುತ್ತೀರೋ?

೩. 'ಪೆನ್ಶನದಾರ'ರಾಗಲಿ, ಇತರರಾಗಲಿ ಮೈದಾನಿನಲ್ಲಿ ವಿಹರಿಸಲಿರುವಷ್ಟೇ ಹ
ಹುಡುಗರಿಗೆ ಅಲ್ಲಿ ಸ್ಯಾಕಲು ಕಲಿಯಲು ಇರುವುದೋ ಇಲ್ಲವೋ?

೪. ಇಷ್ಟು ವರ್ಷಗಳಿಂದ ಮೈದಾನಿನಲ್ಲಿ ಸ್ಯಾಕಲು ಕಲಿಯುತ್ತಿದ್ದರೋ? ಈ ತ
ಸ್ಯಾಕಲ್ ಕಲಿಯುವವರಿಂದ ಜಖಂ ಆದವರೆಷ್ಟು ಮಂದಿಯೆಂ
ಒಂದು ಅಂದಾಜು ಸಂಖ್ಯೆಯಾದರೂ ನಿಮಗೆ ತಿಳಿದಿರುವುದೇ? ಅಥವಾ ಪೆನ್
ದಾರರು (ಇಲ್ಲವೇ ಇತರರು) ಹುಡುಗರ ಸ್ಯಾಕಲು ಚಕ್ರಗಳಿಂದ ತಪ್ಪಿಸಿಕೊಳ್
ಅತ್ತಿತ್ತ ಹಾರಿ ಶ್ರಮಪಟ್ಟ ನಿದರ್ಶನಗಳೆಷ್ಟು ನಿಮ್ಮ ಮುಂದೆ ಇವೆ?

೫. ಮೈದಾನಿಗೆ ನಡೆದು ಬರುವವರಿಗೆ ಮಾರ್ಗದಲ್ಲಿನ (ತರಬೇತಿ ಹೊಂದಿ
ಸ್ಯಾಕಲ್‌ವಾಲಾಗಳಿಂದ ಅಪಾಯವು ಹೆಚ್ಚೋ, ಮೈದಾನಿನ ಪಸುಳೆಗಳಿಂದಲೋ

೬. ವಿಹಾರಕ್ಕಾಗಿ ಬರುವ ಜನರ ದೇಹಗಳನ್ನು ಕಾಪಾಡಲು ಮೈದಾನಿನಲ್ಲಿ ಸ್ಯಾಕ
ಸವಾರಿಯನ್ನು ಮುನಿಸಿಪಾಲಿಟಿಯು ಪ್ರತಿಬಂಧಿಸಬೇಕಾದರೆ, ಮತ್ತೊಂ
ಅನುಕೂಲ ಹಾಗೂ ಯಾರಿಗೂ ಅಪಾಯಬಾರದ ಸ್ಥಳವು ಇಲ್ಲಿ ದೊರೆ
ದಾದರೆ, ಉತ್ಸಾಹೀ ಹುಡುಗರಿಗೆ ಸ್ಯಾಕಲ್ ಕಲಿಯಬೇಕೆಂಬ ಸ್ವಾಭಾ
ವಾದ ಲವಲವಿಕೆಯಿದ್ದರೆ, ನೀವೊಂದು ಪರಿಹಾರ ಸೂಚಿಸುವಷ್ಟು ಕೃ
ಮಾಡುವಿರೋ?

೭. ನೀವು ಸ್ಯಾಕಲ್ ಸವಾರಿ ಬಲ್ಲಿರಾ? ಬಲ್ಲಿರಾದರೆ, ಎಲ್ಲಿ ಯಾವಾಗ ಹೆ
ಕಲಿತಿರಿ ಎಂಬಿಷ್ಟನ್ನಾದರೂ ಪ್ರಕಟಪಡಿಸಿದರೆ ಈ ತುಂಟ ಹುಡುಗರಿಗೆ ಉ
ಕಾರವಾಗದೇ? ಮುನಿಸಿಪಾಲಿಟಿಗೂ ಇದು ಒಂದು ಅಮೂಲ್ಯ ಸೂಚನೆಯಾ
ತೋರಬಾರದೇಕೆ?

೮. ಮೈದಾನಿನಲ್ಲಿ 'ಸಿಕ್ಸರ್'ವಾಲರ ಪಂದ್ಯಾಟವಿರಲಿ; ಚಿಕ್ಕ ಬಾಲ
ಹಲವು ಮಂಡಲಿಗಳು, ನೋಡಿದತ್ತ ವಿಕೆಟುಗಳನ್ನು ಹೂಳಿಟ್ಟು, ದಾ
ಹೋಕರ (ಅಥವಾ ವಿಹರಿಸುವವರ) ಕಡೆಗಿಂತಲೂ ಸಹಜವಾಗಿ ಚೆಂಡ
ಕಡೆಗೆ ಹೆಚ್ಚು ಗಮನಕೊಟ್ಟು ಹೊಡೆಯುತ್ತಿರುವರಲ್ಲ! ಸ್ಯಾಕಲ್ ಸವ
ಗಿಂತಲೂ ಈ ಚೆಂಡಿನ ಮಳೆ ಹೆಚ್ಚು ಕಷ್ಟವಾಗಿ ತೋರುವುದು. ಪ್ರತಿ ನಿ
ಷಕ್ಕೂ ಎಲ್ಲಿ ಚೆಂಡು ಮೈಮೇಲಕ್ಕೆ ಬಿದ್ದುಬಿಡುವುದೋ ಎಂಬ ಭಯ
ಇದಿನ್ನು ೪ ತಿಂಗಳುಗಳ ವರೆಗೆ ಇದೆ. ಇದನ್ನೂ ಪ್ರತಿಬಂಧಿಸಬಹುದೇ? ಅಥ
.........ನೀವೇ ಹೇಳಲಾಗದೇ? 'ಸಿಕ್ಸರ'ರ ಪಂದ್ಯಾಟವು ಮೈದಾನಿನ ಒಂ
ಪರಿಮಿತ ಪ್ರದೇಶದಲ್ಲೆಂದು ಹೇಳಿದ ನೀವು, ಮೈದಾನು ತುಂಬ ಹರಡಿಕೊಂ
ರುವ ಈ ಕ್ರಿಕೆಟ್ ಆಟಗಳಿಗೇನು ಹೇಳುವಿರಿ?

೯. 'ಪೆನ್ಶನ್‌ದಾರ'ರ ಪರವಾಗಿ ಮುಂದೆ ಬಂದ ನೀವು ಮಕ್ಕಳ ಕಡೆಯಿಂದಲೂ,
ಮಕ್ಕಳಿಗೆ ಅನುಕೂಲವಾದ ಒಂದು ಸಲಹೆ ಕೊಡುವಿರಾ? ನಿಮ್ಮ ಮಿತ್ರ

An obstinate man does not hold opinions, but they hold him.

ಹಾಸ್ಯವನ್ನು ಅವಸರದಿಂದ ಓದುವುದಲ್ಲ. ಅದರಲ್ಲಿನ ಶಬ್ದಾರ್ಥದಲ್ಲಡಗಿರುವ ಹಾಸ್ಯರಸವನ್ನು ಹೀರಬೇಕು.

ಬಡವರ ಬಂಧು ಹಾಸ್ಯೌಷಧಾಲಯ.

ಹಾಸ್ಯಸಂಗ್ರಹಕಾರರು ಬೇಕಾಗಿದ್ದಾರೆ. ಉತ್ತಮ ಹಾಸ್ಯಗಳಿಗೆ "ಸುಸ್ವಾಗತ"ವಿದೆ.

ಡಾಕ್ಟರರು:

ವಿದ್ವಾನ್ ರಾಮುಂಭಟ್ಟರು, ನಿರಕ್ಷರ ಕುಕ್ಷಿ.

ಅತೀ ಅಗ್ಗ! ಮನೋರೋಗಕ್ಕೆ ಕೆಳಗಿನವು ದಿವ್ಯೌಷಧ. ನಗುವವರಿಗೆ ಧರ್ಮ!

ತನ್ನ ಹೆಂಡತಿ ಇಲಿಯ ಮರಿಯನ್ನು ಆಕಸ್ಮಾತ್ತಾಗಿ ನುಂಗಿದಳೆಂದು ಬಹಳ ಹೆದರಿಗೊಂಡು ನಮ್ಮ ಬೋರಣ್ಣನು ಡಾಕ್ಟರವರ ಬಳಿಗೆ ಹೋಗಿ "ಸ್ವಾಮಿ! ನಮ್ಮ ನಾಗಮ್ಮಳು ಇಲಿಮರಿಯನ್ನು ನುಂಗಿರುವಳು. ದಯಮಾಡಿ ಅದಕ್ಕೇನಾದರೂ ಮದ್ದು ಕೊಡಬೇಕು" ಎನಲು

ಡಾಕ್ಟರನು:-ಮಿತ್ರಾ, ಓಡಿಹೋಗಿ ಆವಳಿಗೊಂದು ಬೆಕ್ಕಿನ ಮರಿಯನ್ನು ನುಂಗಿಸು. ಎಲ್ಲಾ ವಿಲೆವಾರಿ ಅದು ಮಾಡುತ್ತದೆ. ಎಂದು ಜವಾಬಿತ್ತು ಕಳುಹಿದನು.

× × × ×

"ಎಲಾ, ಹಿತ್ತಿಲಲ್ಲಿ ತೆಂಗಿನಮರ ಹತ್ತಿ ಎರಡು ತೆಂಗಿನ ಕಾಯಿಗಳನ್ನು ತೆಗೆದುಕೊಡು" ಎಂದು ಮನೆಯ ಯಜಮಾನಿಯು ಒಬ್ಬನನ್ನು ಕರೆದು ಹೇಳಲು, ಅವನು ಹೋಗಿ ೬ ತೆಂಗಿನಕಾಯಿಗಳನ್ನು ಕಿತ್ತುಹಾಕಿದನು. "ಆರು ಕಾಯಿಗಳನ್ನು ಯಾಕೆ ತೆಗೆದಿಯೋ" ಎಂದು ಆಕೆ ಕೇಳಲು, ನನಗೆ ಮರ ಹತ್ತಿದ್ದಕ್ಕೊಂದು ಕಾಯಿ, ಇಳಿದದ್ದಕ್ಕೊಂದು ಕಾಯಿ, ನೀವು ಕೊಡುವುದೊಂದು, ಮತ್ತು ನಾನು ತಕ್ಕೊಳ್ಳುವುದು ಒಂದು. ಇನ್ನು ಉಳಿದ ಆ ೨ ಕಾಯಿಯೂ ನಿಮಗೆ ಬೇಡವಾದರೆ, ನನಗೇ ಇರಲಿ" ಎಂದು ಹೇಳಿದನು.

ವೇ. ಸು.

× × × ×

ಗಂಡ:—ಮನೆಯ ಎದುರುಗಡೆಯಿಂದ ಹಾದು ಹೋಗುತ್ತಿದ್ದ ಕತ್ತೆಯೊಂದನ್ನು ಹೆಂಡತಿಗೆ ತೋರಿಸಿ—ನೋಡು ನಿನ್ನ ಸಂಬಂಧಿಕ ಎಂದು ಹೇಳಿದ.

ಹೆಂಡತಿ:— ಹೌದು, ಆದೆನಗೆ ನಾದಿನಿಯಾಗಬೇಕು.

× × × ×

ಒಬ್ಬ:—ಸ್ವಾಮಿ! "ಬಡವರ ಬಂಧು" ಬೇಕೇ? ವರ್ಷಕ್ಕೆ ಬರೇ ಒಂದು ರೂಪಾಯಿ ಚಂದಾಹಣ.

ಸಿರಿವಂತನೊಬ್ಬ:—ಏನೋ? ನಿನಗೆ ಕಣ್ಣು ಕಾಣಿಸುವುದಿಲ್ಲವೇ? ನಾನೇನು ಬಡವನೆಂದು ನೆನಸಿದ್ದೀಯೋ? ನಡೆ, "ದೊಡ್ಡವರ ಬಂಧು"ವನ್ನು ತಂದುಕೊಡು. ವರ್ಷಕ್ಕೆ ಏಳೆಂಟು ರೂಪಾಯಿಗಳಾದರೂ ಚಿಂತಿಲ್ಲ.

× × × ×

ಪೋರ:—ದುಡ್ಡಿಗೆ ೮ರ ಬಾಳೆಹಣ್ಣು ಉಂಟೇ?

ಅಂಗಡಿಯವ:—ಉಂಟು, ಎಷ್ಟು ಬೇಕಿತ್ತು?

ಪೋರ:—ದುಡ್ಡಿಗೆ ಎಂಟಾದರೆ ೧೬ ದುಡ್ಡಿಗೆಷ್ಟು ಹಣ್ಣು ಸಿಗುವುದು?

ಅಂಗಡಿಯವ:—೧೬ ದುಡ್ಡಿಗೆ ೧೨೮ ಹಣ್ಣುಗಳು ಸಿಗುವುವು, ೪ ಹಣ್ಣುಗಳನ್ನು ಹೆಚ್ಚಿಗೆ ಕೊಡುವೆನು. ಕೊಡಲೋ?

ಪೋರ:—ಬೇಡ, ನಾನು ಅದಕ್ಕಲ್ಲ ಕೇಳಿದ್ದು. ಮಾಸ್ಟರರು ದುಡ್ಡಿಗೆ ೮ರಂತೆ ೧೬ ದುಡ್ಡಿಗೆಷ್ಟು ಹಣ್ಣು? ಎಂಬ ಒಂದು ಮನೆಲೆಖ್ಖವನ್ನು ಕೊಟ್ಟದ್ದಾರೆ. ಅಷ್ಟಕ್ಕೆ" ಎಂದು ಹೇಳಿ ಓಡಿಹೋದನು.

× × × ×

ಗಫಲತ್ ಖಾನ್।—ನಾನು ಮೊನ್ನೆ ಉತ್ತರ ಸೀಮೆಗೆ ಹೋಗಿದ್ದೆ. ನೋಡಿಯಯ್ಯಾ. ಅಲ್ಲಿ ಒಂದೊಂದು ಮೂಲಂಗಿ ಗಿಡ ಬೆಳೆದಿದ್ದುವಯ್ಯಾ! ಎಷ್ಟು ಎತ್ತರವೆಂದರೆ ನಮ್ಮ ಊರಿನ ತೆಂಗಿನ ಮರದಷ್ಟು!

ಡೊಂಗೀರಾವ್:—ಹುಂ! ನಾನೂ ಮೊನ್ನೆ ಮೊನ್ನೆ ಆ ಕಡೆ ಹೋಗಿದ್ದೆ. ಆಗ ಅಲ್ಲಿ ಒಂದು ಕಡೆಯಲ್ಲಿ ಕೆಲವು ಹಂಡೆಗಳನ್ನು ಮಾಡಿಟ್ಟಿದ್ದರು. ಅದರಲ್ಲಿ ತೀರ ಸಣ್ಣ ಹಂಡೆಯು ಎರಡು ಆನೆಯ ಗಾತ್ರವಿತ್ತು.

ಗಫಲತ್ ಖಾನ್:— ಅದು ಯಾಕಪ್ಪಾ ಅಷ್ಟು ದೊಡ್ಡ ಹಂಡೆ?

ಡೊಂಗೀರಾವ್:-ಹುಚ್ಚ ನೀನು ಆಗ ಹೇಳಿದ ಮೂಲಂಗಿ ಗಿಡ ಬೇಯಿಸುವುದಕ್ಕೆ ಇರಬಹುದು.

× × × ×

ಯಜಮಾನ:—ಈ ಹಳೆ ಅಂಗಿಯು ನಿನಗೆ ಸೊಂಟದಲ್ಲಿ ಬಹಳ ಸಡಿಲವಾಗಬಹುದು ಏನು ಮಾಡಲೀ!

ಭಿಕ್ಷುಕ:—ಅದು ಸರಿಯಾಗುವಂತೆ ದಯಮಾಡಿ ಒಂದು ಊಟವನ್ನೂ ಕೊಡಬಾರದೇ!

× × × ×

ನ್ಯಾಯಾಧಿಪತಿ:- (ಸಾಕ್ಷಿಯನ್ನು ಸವಾಲು ಮಾಡುತ್ತ) ಅಪರಾಧಿಯು ಫಿರ್ಯಾದಿಯನ್ನು ಹೊಡೆಯುವುದನ್ನು ನೀನು ಕಣ್ಣಾರೆ ನೋಡಿದ್ದಿಯೋ? ಸರಿಯಾಗಿ ಹೇಳು.

ಸಾಕ್ಷಿಗಾರ—ನಾನು ಒಳಗಿದ್ದುದರಿಂದ ಕಣ್ಣಿನಲ್ಲಿ ನೋಡಲಿಕ್ಕಾಗಲಿಲ್ಲ. ಗುದ್ದುವ ಶಬ್ದವು ಕೇಳಿತಷ್ಟೆ!

ನ್ಯಾಯಾಧಿಪತಿ:—ಛೆ! ಈ ಸಾಕ್ಷಿ ಬಲಸಾಲದು!

ಇದನ್ನು ಕೇಳಿದೊಡನೆ ಸಾಕ್ಷಿಗಾರನು ನ್ಯಾಯಾಧಿಪತಿಯು ಕಡೆ ಬೆನ್ನು ಮಾಡಿ ಗಟ್ಟಿಯಾಗಿ ನಕ್ಕುಬಿಟ್ಟನು.

ನ್ಯಾಯಾಧಿಪತಿ:— (ಸಾಕ್ಷಿಗಾರನ ಕಡೆ ನೋಡಿ) ನೀನು ಕೋರ್ಟಿನಲ್ಲಿ ಗಟ್ಟಿಯಾಗಿ ನೆಗಾಡಿ ಕೋರ್ಟನ್ನು ಅವಮಾನ ಮಾಡಿದ್ದೀಯೆಂದು ಯಾಕೆ ಚಾರ್ಜು ಮಾಡಕೂಡದು?

ಸಾಕ್ಷಿಗಾರ:— ನಾನು ನೆಗಾಡಿದ್ದು ತಾವು ನೋಡಿದಿರಾ?

ನ್ಯಾಯಾಧಿಪತಿ:—ಇಲ್ಲ. ಕಿವಿಗೆ ಕೇಳಿಸಿತು.

ಸಾಕ್ಷಿಗಾರ:—ಛೇ! ಈ ಸಾಕ್ಷಿಗೂ ಬಲಸಾಲದು. (ಈಗ ಮಾತ್ರ ಕೋರ್ಟಿನಲ್ಲಿದ್ದವರೆಲ್ಲರೂ ನೆಗಾಡಿದರು.)

× × × ×

ವಿದ್ಯಾರ್ಥಿ:—ಐದು ಸಾರ್.

× × × ×

ಗಿರಾಕಿ:—ನೀವು ನಿನ್ನೆ ಕೊಟ್ಟ ಮಾಂಸ ಬಲು ನಾರು, ತಿನ್ನುವುದಕ್ಕಾಗಲಿಲ್ಲ. ಗೇಟಿನ ಸ್ಪ್ರಿಂಗಿನಂತೆ ಉದ್ದ ಬರುತ್ತಿತ್ತು.

ಮಾಂಸದವ:- ಛೆ! ಎಂದಿಗೂ ಇಲ್ಲ. ನಾನು ಒಳ್ಳೆದೇ ಕೊಟ್ಟದ್ದೇನೆ. ನೀವು ಮಾತ್ರ ವರ್ಷಾರು ತಿಂಗಳಿಗೊಂದು ಸಲ ಮಾತ್ರ ಮಾಂಸ ತಿನ್ನುವುದರಿಂದ ನಿಮ್ಮ ಹಲ್ಲಿಗೆ ಹೆಚ್ಚಿನ ಪ್ರಾಕ್ಟೀಸಿಲ್ಲದೆ ಹಾಗಾಗಿರಬಹುದು.

ಗಿರಾಕಿ:—ಇಲ್ಲಪ್ಪಾ! ಚೂರಿಯಲ್ಲಿ ಸಹ ಕೊಯ್ಯಲಿಕ್ಕಾಗಲಿಲ್ಲ!

ಮಾಂಸದವ:—ಈಗೀಗ ಪೇಟೆಯಲ್ಲಿ ಒಳ್ಳೇ ಚೂರಿಗಳೇ ಸಿಕ್ಕುವುದಿಲ್ಲ. ನೀವು ಒಳ್ಳೇ ರಾಜೇಶ್ರೀ ಚೂರಿಯಲ್ಲಿ ಕೊಯಿದು ನೋಡಬೇಕಿತ್ತು?

× × × ×

ಸಬ್ ಇನ್ಸಪೆಕ್ಟರ್:— ಮಹಾಸ್ವಾಮಿ, ನಂಬ್ರ ...ನೇ ಪೋಲೀಸಿನವನಿಗೆ ಉಡುಪು ಬಹಳ ಬಿಗಿಯಾಗುತ್ತದೆ, ಹಿಡಿಸುವುದೇ ಇಲ್ಲ. ಬೇರೆ ಆರ್ಡರ್ ಮಾಡಿದರಾದೀತು.

ಪೋಲೀಸ್ ಇನ್ಸಪೆಕ್ಟರ್:—ಹುಂ! ಅವನು ಯಾವ ಬೀಟಿನಲ್ಲಿರುವವನು?

ಸಬ್ ಇನ್ಸ್‌ಪೆಕ್ಟರರು:— ಮಾರ್ಕೆಟ್ಟು ಬಾಗಲಿನ ಚೌಕ ಮಹಾಸ್ವಾಮಿ!

ಪೋಲೀಸ್ ಇನ್ಸ್‌ಪೆಕ್ಟರರು:—ಅವನನ್ನು ಹಂಪನಕಟ್ಟೆ ಬೀಟಿಗೆ ಹಾಕಿ ಚೆನ್ನಾಗಿ ದಣಿಸಿದರಾಯಿತು.

ಇ. ಡಿ. ಅ.

A fit of anger is always a misfit.

ಆಲ್ ಇಂಡಿಯಾ ಆಯುರ್ವೇದ ಮಂಡಲಿಯಲ್ಲಿಯೂ, ಮೈಸೂರು ಎಗ್ಜಿಬಿಷನ್‌ನಲ್ಲಿಯೂ ಸನ್ಮಾನವು ದೊರೆತಿರುವುದು.

ರತನ್ ಮಿಶ್ರಿ ಹಲ್ವಾ (REGD.)

ಸೋದರರೇ,

ಈ ಕಾಲದ ಅನೇಕ ಯುವಕರು 20—30 ವರ್ಷ ವಯಸ್ಸಿನಲ್ಲೇ ಮುದುಕರಂತೆ ನಿಶ್ಶಕ್ತರಾಗಲು ಕಾರಣವೇನು? ಕೇವಲ ಆರಿ ತೀರಿದ ಯಜಮಾನರಂತೆಯೂ, ವೇದಾಂತ ಶಿರೋಮಣಿಗಳಂತೆಯೂ ನಿರುತ್ಸಾಹಕರಾಗಿ ಸಂಸಾರಸುಖವನ್ನು ಸ್ವಪ್ನದಲ್ಲಿ ಅನುಭವಿಸುವವರಂತೆ ಇರುತ್ತಾರೆ. ಇದಕ್ಕೆಲ್ಲವೂ ಸುಖಕ್ಕೆ ಬುಡವಾದ ಧಾತು ಕ್ಷೀಣವಾಗಿರುವುದೇ ಕಾರಣ. ಸ್ವಪ್ನ ಸ್ಖಲನ, ಶೀಘ್ರ ಸ್ಖಲನ, ಅಜೀರ್ಣ, ಮಲಬದ್ಧ, ನಿಶ್ಶಕ್ತತೆ, ಕೆಮ್ಮು, ಶ್ವಾಸ ಸಂಬಂಧ ವ್ಯಾದಿಗಳಿಂದ ಕೂಡಿ, ಸ್ತ್ರೀ ಸುಖವನ್ನೇ ಅರಿಯದೆ ತಮ್ಮೊಳಗೆ ತಾವೇ ಚಿಂತಿಸಿ, ಚಿಂತಿಸಿ, ನಿರುತ್ಸಾಹಕರಾಗಿರುತ್ತಾರೆ. ಅಂಥವರಿಗಾಗಿಯೇ ಈ ರತನ್ ಮಿಶ್ರಿ ಹಲ್ವಾ ಏರ್ಪಟ್ಟಿರುವುದು. ಸ್ತ್ರೀ ಪುರುಷರಾದಿಯಾಗಿ ಒಂದು ಮಂಡಲ ಸೇವಿಸಿದಲ್ಲಿ ನಶಿಸಿದ ಯೌವನವು ಪುನಃ ಬರುವುದಲ್ಲದೆ, ವಜ್ರ ಕಾಯರಾಗುವಿರಿ.

ಈ ಊರಿನಲ್ಲಿಯೆ ಅನೇಕ ಅಂಗಡಿಗಳಲ್ಲಿಯೂ ದೊರೆಯುವುದು ಕ್ರಯ 1 ಪೌಂ. 4—8—0. ½ ಪೌಂ. 2—8—0.

☞ ಉಪಯೋಗಿಸಿರುವ ಮಹಾಶಯರ ಅಭಿಪ್ರಾಯ ☜

ಅಯ್ಯಾ, ನಾನು ಕಳೆದ ವರ್ಷ ೧॥ ಪೌಂಡು ರತನ್ ಮಿಶ್ರಿಹಲ್ವಾ ತರಿಸಿ ಸೇವಿಸಿದೆನು. ಇದರಿಂದ ನನಗೆ ಬಹಳ ಗುಣ ಕಂಡು ಬಂದಿತು. ದಯವಿಟ್ಟು ಅರ್ಧ ಪೌಂಡು ವಿ. ಪಿ. ಮೂಲಕ ಕಳುಹಿಸಿ.

Sd. ತುಂಗಾ ಸುಬ್ಬರಾವ್, ಜಮೀನ್‌ದಾರ್, ಪುತ್ತೂರು.
22—4—1931.

ಅಯ್ಯಾ, ನಾನು ೬೦ ದಿನಗಳಿಂದ ಕೃಶತ್ವ ಹೊಂದುತ್ತಾ ಅಶಕ್ತನಾಗಿದ್ದೆನು. ಅನೇಕ ಔಷಧಗಳನ್ನುಪಯೋಗಿಸಿದೆನು. ಗುಣ ಕಂಡು ಬರಲಿಲ್ಲ. ನಂತರ ರತನ್ ಮಿಶ್ರಿ ಹಲ್ವಾವನ್ನು ೪೪ ದಿವಸ ಸೇವಿಸಿದೆನು. ಇದರಿಂದ ಬಹಳ ಆರೋಗ್ಯವಾಯಿತು.

Sd. ಬಿ. ಶ್ರೀನಿವಾಸಯ್ಯಂಗಾರ್, ಜೋಡಿದಾರ್, ಆನೆಕಲ್.
1—10—1931.



ಹಿಮಗಿರಿ ತೈಲ. (Regd.)

ಭಾರತೀಯರೇ,

ಸಾಮಾನ್ಯವಾಗಿ ಉಷ್ಣ ಪೈತ್ಯದಿಂದಲೇ ಅನೇಕ ವ್ಯಾದಿಗಳುಂಟಾಗುವುವು. ಅದರಲ್ಲಿಯೂ, ತಲೆ ನೋವು, ಕಣ್ಣುರಿ, ಕಣ್ಣಿನಲ್ಲಿಯೂ, ಮೂಗಿನಲ್ಲಿಯೂ ನೀರು ಸುರಿಯುವಿಕೆ, ತಲೆ ತಿರುಗುವಿಕೆ, ಕೆಮ್ಮು, ನಿಶ್ಶಕ್ತಿ, ತಲೆಭಾರ, ಅಂಗಾಂಗಗಳ ನೋವು, ಮಲಬದ್ಧ ಇವು ಮುಖ್ಯವಾದವು. ಈ ವ್ಯಾಧಿಗಳುಂಟಾಗಲು ಅತ್ಯುಷ್ಣವೇ ಪ್ರಧಾನವು. ಇದಕ್ಕಾಗಿಯೇ ಪೂರ್ವಿಕರು ವಾರಕ್ಕೊಂದಾವರ್ತಿ ಅಭ್ಯಂಜನ ಸ್ನಾನಮಾಡುತ್ತಿದ್ದರು. ಈ ಕಾಲದವರನೇಕರು ಅಭ್ಯಂಜನ ಸ್ನಾನವನ್ನೇ ಅರಿಯರು. ಇದು ಶುದ್ಧ ತಪ್ಪು. ಈ ದಿನವೇ ಹಿಮಗಿರಿ ತೈಲವನ್ನು ಕೊಂಡು ಸ್ನಾನಮಾಡಿ. ಆರೋಗ್ಯವಂತರಾಗಿರಿ. ದಿನಾಗಲೂ ಹೆಂಗಸರಾದಿಯಾಗಿ ತಲೆಗೆ ಸವರಿಕೊಂಡು ಬಾಚಿಕೊಂಡರೆ ಕೂದಲು ಕಪ್ಪಾಗಿಯೂ, ಉದ್ದವಾಗಿಯೂ ಬೆಳೆಯುವುದು

ಕ್ರಯ 1—0—0. 0—8—0.

ಈ ಊರಿನ ಅನೇಕ ಅಂಗಡಿಗಳಲ್ಲಿಯೇ ದೊರೆಯುವುದು.

(Sd.) ದೇವುಡು, ಎಮ್. ಎ., ರವರ ಅಭಿಪ್ರಾಯ. [15-2-'32.

“ಮಹಾಶಯರೇ—ತಾವು ಕಳುಹಿಸಿದ ಹಿಮಗಿರಿ ತೈಲವನ್ನು ಉಪಯೋಗಿಸಿದೆನು. ವಾಸನೆಯು ಇತರ ತೈಲಗಳಂತೆ ಇಲ್ಲದಿದ್ದರೂ ಅದರಲ್ಲಿರುವ ಮನೋಹರವಾದ ಅದ್ಭುತ ಗುಣವನ್ನು ವರ್ಣಿಸಲಸಾಧ್ಯವಾದದ್ದು. ಅಮೃತಾಂಜನದಂತೆ ದೇಶದಲ್ಲಿ ಇದು ಪ್ರಸಿದ್ಧಿಯಾಗುವುದೆಂದು ನಂಬಿರುವೆನು.”

ಅಯ್ಯಾ, ನನಗೆ ಸುಮಾರು ಹತ್ತು ವರ್ಷಗಳಿಂದಲೂ ತಲೆನೋವು ತಲೆ ತಿರುಗುವಿಕೆ, ದೃಷ್ಟಿಮಾಂದ್ಯ, ಆಗಾಗ್ಗೆ ಬೀಳುವಿಕೆ. ಈ ವಿಧವಾದ ವ್ಯಾಧಿಗಳಿದ್ದುವು. ಇದಕ್ಕಾಗಿ ವಿಕ್ಟೋರಿಯಾ ಆಸ್ಪತ್ರೆಗೆ ಹೋದೆನು. ಅನೇಕ ಡಾಕ್ಟರುಗಳ ಹತ್ತಿರ ಹೋದೆನು. ಇದು ಜಾಗ್ರತೆ ಹೋಗುವ ವ್ಯಾಧಿಯಲ್ಲವೆಂದು ಅಭಿಪ್ರಾಯಪಟ್ಟರು. ಕಡೆಗೆ ಹಿಮಗಿರಿ ತೈಲವನ್ನು ಅಭ್ಯಂಜನಕ್ಕೆ ಉಪಯೋಗಿಸುತ್ತಾ ಬಂದೆನು. ಒಂದು ತಿಂಗಳಲ್ಲಿ ಈ ವ್ಯಾಧಿಯು ಗುಣವಾಗಿ ಆರೋಗ್ಯವಾಯಿತು. ಉಷ್ಣ ಶರೀರಗಳಿಗೆ ಇದು ಕಲ್ಪವೃಕ್ಷವಾದುದು.

(Sd.) ಕರ್ಣಾಟಕ ಕವಿರತ್ನ, ಹೊಸಕೆರೆ ಚಿದಂಬರಯ್ಯ,
ಭಕ್ತಬಂಧು ಕಾರ್ಯಾಲಯ, [illegible]

Selling Agents:—

A. Somappa & Co.,
Mangalore.

Ratan Misri Depot,
Bangalore.

ಉಚಿತ!



ಇದೋ ನೋಡಿ! ಇದೋ ನೋಡಿ!

'ಬಡವರ ಬಂಧು'ವಿನ ಪ್ರಥಮ ವರ್ಷೋತ್ಸವವು ಅತೀ ವಿಜೃಂಭಣೆಯಿಂದ ಜರಗಲಿರುವುದು.

ಇದರ ಸ್ಮರಣೆಗಾಗಿ ನಮ್ಮ ವರ್ಷಾಂತ್ಯವಾಗುತ್ತಲೇ ಸುಮಾರು ಎಂಟಾಣೆ ಕ್ರಯ ಬಾಳುವ ಒಂದು ಸಚಿತ್ರ ವಿಶೇಷ ಸಂಚಿಕೆಯನ್ನು ಹೊರಡಿಸಿ, ನಮ್ಮ ಸಾವಿರಾರು ಚಂದಾದಾರರಿಗೂ ಉಚಿತವಾಗಿ ಹಂಚಲಿರುವೆವು.

ಗಣ್ಯಲೇಖಕರ ಬರೆಹ! **ಚಿತ್ರಪಟಗಳ ಸುಗ್ಗಿ!**

ಈ ತಿಂಗಳೊಳಗೆ ಚಂದಾದಾರರಾಗುವವರಿಗೆ ನಾಲ್ಕಾಣೆ ಕ್ರಯದ ಒಂದು ಉತ್ತಮ ಪದ್ಯಗ್ರಂಥವು ಉಚಿತ!

ಕೂಡಲೇ ಮನಿಯಾರ್ಡರ್ ಮಾಡಿರಿ! ವಿ.ಪಿ.ಗೆ ಆರ್ಡರು ಕೊಡಿರಿ.

ಜಾಹೀರಾತಿಗೆ ಸುಸಂಧಿ!

ಮೆನೇಜರ್,
'ಬಡವರ ಬಂಧು' ಮಂಗಳೂರು.

ಆಡು 'ಮಗು'ವನ್ನು ಹೆತ್ತಿತು.

ನೋಡಿ ಲೋಕದ ಸ್ಥಿತಿ! ಎಲ್ಲಾ ಹಿಂದುಮುಂದು—ಎಲ್ಲೆಲ್ಲಿಯೂ ವಿಚಿತ್ರ! ಇದಲ್ಲಾ ವಿಚಿತ್ರಭೂಮಿ. ಸುಳ್ಳಲ್ಲ, ಹೇಳುತ್ತೇನೆ ಕೇಳಿ:—ನಾಗಪುರದ ಹನ್ಸಾಪುರಿಯೆಂಬಲ್ಲೊಂದು ಹೆಣ್ಣಾಡು ಒಂದು ಮನುಷ್ಯ ಶಿಶುವನ್ನು ಹೆತ್ತಿದೆ. ಪತ್ರಿಕಾಪ್ರತಿನಿಧಿಗಳೂ, ಸಾವಿರಗಟ್ಟಳೆ ಜನರೂ ಇದನ್ನು ಕಣ್ಣಾರೆ ಕಂಡಿರುವರಂತೆ. ಮೂಗು ಕೈಕಾಲು ಮುಂಡರುಂಡಗಳಿಂದ ಮನುಷ್ಯ ಮಗುವಿಗಿಂತ ಬೇರೆಯಿಲ್ಲ. ಮಾತ್ರ, ಅದರ ಬೆನ್ನ ಕೆಳಗೆ ಒಂದು ಮಾಂಸದ ಮುದ್ದೆ! ಬಾಲವೆಂದು ಊಹಿಸಲೆಡೆಯಿದೆ. ಅಷ್ಟೆ. ತಾಯಿ ಆಡು ಬದುಕಿದೆ. ಮಗು ಮಾತ್ರ ಸತ್ತಿದೆ. ಹುಟ್ಟುವಾಗಲೇ ಸ್ತಬ್ಧ! ಇದಕ್ಕೇನನ್ನುವಿರಿ? ಈ ವಾರ್ತೆ ಸಂಡೆ ಟೈಮ್ಸಿನಲ್ಲಿದೆ.

ಹೆಣ್ಣು ಸೈನದಲ್ಲಿ!

ಇದೊಂದನ್ನು ಕೇಳಿ! ಫ್ರೆಂಚರ ಫೊರೇಯಿನ್ ಲಿಜಿಯನಿನ ಸೈನಿಕರು ಒಂದು ಕಡೆಗೆ ರೈಲು ಮೇಲೆ ಪ್ರಯಾಣ ಮಾಡುತ್ತಿದ್ದರು. ಒಂದು ಕಡೆ ಇಡೀ ರೈಲು ರಜಿಮೆಂಟಿನ ಸಮೇತ ದೊಡ್ಡ ಖಣಿಗೆ ಬಿದ್ದು ಎಲ್ಲರೂ ನಿರ್ನಾಮವಾದರು—ಹೆಣಗಳನ್ನೆತ್ತಲಾಯಿತು. ಮೂವತ್ತು ಶವಗಳನ್ನು ಪರೀಕ್ಷಿಸಿದರು. ಅವರಲ್ಲಿ ಒಬ್ಬಳು ಸಿಪಾಯಿಯು ಸ್ತ್ರೀ! ಅಧಿಕಾರಿಗಳಿಗೆ ದಿಗಿಲಾಯಿತು. ಡಾಕ್ಟರರು ಪರೀಕ್ಷಿಸಿದರು. ತರುಣಿಯಲ್ಲದೆ ಮತ್ತೇನು? ಅವಳ ಅಂಗಿಯ ನಂಬರನ್ನೂ ಆಫೀಸು ಪುಸ್ತಕವನ್ನೂ ನೋಡುವಾಗ ಅವಳ ಹೆಸರು ಸಿಡ್ನಿ ಹಾರ್ಡಿ ಎಂಬ ಪುರುಷ ಹೆಸರಾಗಿತ್ತು!

> ಹಾಸ್ಯವನ್ನು ಅವಸರದಿಂದ ಓದುವುದಲ್ಲ. ಅದರಲ್ಲಿನ ಶಬ್ದಾರ್ಥದಲ್ಲಡಗಿರುವ ಹಾಸ್ಯರಸವನ್ನು ಹೀರಬೇಕು.

ಬಡವರ ಬಂಧು ಹಾಸ್ಯೌಷಧಾಲಯ.

> ಹಾಸ್ಯಸಂಗ್ರಹಕಾರರು ಬೇಕಾಗಿದ್ದಾರೆ. ಉತ್ತಮ ಹಾಸ್ಯಗಳಿಗೆ "ಸುಸ್ವಾಗತ" ವಿದೆ.

ಡಾಕ್ಟರರು:

ರೋಗವಿಲ್ಲದ ನಾಗಣ್ಣ, S. S. L. C. F. A. I. L. E. D.

ಅತೀ ಅಗ್ಗ! — **ಮನೋರೋಗಕ್ಕೆ ಕೆಳಗಿನವು ದಿವ್ಯೌಷಧ.** — **ನಗುವವರಿಗೆ ಧರ್ಮ!**

ದೂಮು:–ನನ್ನ ಮಗನನ್ನು ತಮ್ಮ ಶಾಲೆಗೆ ಸೇರಿಸಬೇಕೆಂದಿದ್ದೇನೆ ಸ್ವಾಮಿ! ಸಂಬಳವೆಷ್ಟು?

ಮಾಸ್ತರು:–ಈ ತಿಂಗಳಲ್ಲಿ ಎಡ್ಮಿಶನ್ ಫೀಸು ಮತ್ತು ಸಂಬಳ ಒಟ್ಟಿಗೆ ಒಂದು ರೂಪಾಯಿ. ಬರುವ ತಿಂಗಳಿನಿಂದ ಬರೇ ಎಂಟಾಣೆ ಮಾತ್ರ.

ದೂಮು:–ಸರಿ! ಹಾಗಾದರೆ ನಾನು ಬರುವ ತಿಂಗಳಲ್ಲಿಯೇ ಅವನನ್ನು ಸೇರಿಸುತ್ತೇನೆ ಸ್ವಾಮಿ.

\+ + + +

ಮಾಸ್ತರು:–ನನ್ನ ಹತ್ತಿರ ಹದಿನಾರು ಮಾವಿನ ಹಣ್ಣುಗಳಿವೆ. ಅದನ್ನು ಸರಿಯಾಗಿ ನಾಲ್ಕು ಜನರಿಗೆ ಹಂಚಿದರೆ ಒಬ್ಬೊಬ್ಬನಿಗೆ ಏನೇನು ಬರುವುದು?

ಐದು ವರ್ಷದೊಬ್ಬ ಹುಡುಗ:–ಹೊಟ್ಟೆನೋವು ಬರುತ್ತೆ.

[ಕೆ. ಓವಯ ಶೆಟ್ಟಿ, ಮಂಗಳೂರು.]

\+ + + +

ಉಪಾಧ್ಯಾಯ:– ದಾನದಲ್ಲಿ ದೊಡ್ಡ ದಾನ ಯಾವುದು?

ಸಣ್ಣ ಪೋರ:–ವ್ಯೆ–ದಾನ ಸರ್.

ಉಪಾಧ್ಯಾಯ:–ಅಂದರೆ?

ಸಣ್ಣ ಪೋರ:–ವ್ಯೆದಾನ.

\+ + + +

ಸಾಲ ಕೊಟ್ಟವ:–ಹಣ ಎಲ್ಲಿದೆಯೋ! ಕೊಡು.

ಸಾಲಗಾರ:–ಎಂತಹ ಹಣವಯ್ಯಾ? ನಾನು ಬಾಯಿಯಲ್ಲಲ್ಲದೆ ಕೈಯಲ್ಲಿ ಕೊಡುತ್ತೇನೆಂದು ಹೇಳಿರುವೆನೇ? [ಕೆ. ಲಕ್ಷ್ಮಣ, ಮಂಗಳೂರು]

\+ + + +

ಗುಮಾಸ್ತ:–(ಅರ್ಜಿಯನ್ನು ಕೈಲಿ ಹಿಡಿದುಕೊಂಡು) ಮಹಾ ಸ್ವಾಮಿ! ಈ ಅರ್ಜಿದಾರನಿಗೆ ಕೆಲಸಕ್ಕೆ ಮೊಖರೂರು ಮಾಡಿದ ಆರ್ಡರು ಕಳುಹಿಸೆಂದು ಹೇಳುತ್ತೀರಿ. ಸದ್ರಿ ಅರ್ಜಿಯಲ್ಲಿ ಅರ್ಜಿದಾರನ ವಿಳಾಸವೇ [illegible]ವಾ.

ತಹಶೀಲ್ದಾರ:–ಉಂ! ಅದೂ ಸಹ ನನ್ನನ್ನು ಕೇಳಬೇಕೆ? ವಿಳಾಸವನ್ನು ತಿಳಿಸೆಂದು ಬರೆದುಹಾಕಿದರಾಯಿತು.

\+ + + +

ಗಿರಾಕಿ:–ನಿನ್ನೆಯಲ್ಲವೇ ನೀನು ಈ ಕೋಟು ಹೊಲಿದು ಕೊಟ್ಟದ್ದು? ನೋಡು ಈ ಹೊತ್ತೇ ಬೆನ್ನ ಮೇಲಿನ ಹೊಲಿಗೆ ಪೂರಾ ಬಿಟ್ಟು ಹೋಗಿದೆ. ಇಂಥಾ ಕೆಲಸಮಾಡಬಹುದೇ?

ದರ್ಜಿ:– ಅದರಲ್ಲಿಯೇ ತಿಳಿಯುವುದಲ್ಲವೇ ನಾವು ಎದುರಿನ ಗುಂಡಿ(buttons)ಗಳನ್ನು ಎಷ್ಟು ಬಲವಾಗಿ ಹೊಲಿಯುತ್ತೇವೆಂದು.

\+ + + +

ಅವ: – ನೋಡು! ನಾನು ಮೊದಲಿಂದಲೂ ಮಾಂಸಾಹಾರವನ್ನೇ ಮಾಡುತ್ತಿರುವುದರಿಂದ ನನ್ನ ಶರೀರದಲ್ಲಿ ಒಂದು ಕೋಣದಷ್ಟು ಬಲವಿದೆ.

ಇವ:–ಇದೀಗ ಬಲು ವಿಚಿತ್ರ, ನಾನು ಚಿಕ್ಕಂದಿನಿಂದಲೂ ಮೀನು ತಿನ್ನುತ್ತಿದ್ದರೂ ಒಂದು ಮಾರುದ್ದ ಸಹ ಈಜಲಿಕ್ಕೆ ಬರುವುದಿಲ್ಲವಲ್ಲಾ!

\+ + + +

ಉಪಾಧ್ಯಾಯ:–(ಕ್ಲಾಸಿನಲ್ಲಿ ಒಬ್ಬ ಹುಡುಗನನ್ನು ಕುರಿತು) ಎಲೋ ವೆಂಕಟೇಶ! ಬೆಂಕಿಕಡ್ಡಿಗಳನ್ನು ಹ್ಯಾಗೆ ತಯಾರಿಸುತ್ತಾರೆ? ವಿವರಿಸಿ ಹೇಳು.

ವೆಂಕಟೇಶ:–ಅದನ್ನು ತಿಳಿದುಕೊಳ್ಳಲು ತಾವು ಆತುರಪಡುತ್ತಿರುವುದು ಏನೂ ಆಶ್ಚರ್ಯವಲ್ಲ ಸಾರ್.

ಉಪಾಧ್ಯಾಯ:–ಹಾಗಂದರೆ ಏನು?

ವೆಂಕಟೇಶ:–ಅದನ್ನು ತಿಳಿದುಕೊಳ್ಳಲು ತಾವು ಬಹಳ ವರ್ಷದಿಂದ ಪ್ರಯತ್ನ ಮಾಡುತ್ತಿದ್ದೀರೆಂದು ತಂದೆಯವರು ಆಗಾಗ್ಗೆ ಹೇಳುತ್ತಿದ್ದರು.

[ಇ. ಡಿ. ಅಂಚನ್, ಮಂಗಳೂರು.]

\+ + + +

ಬಡವ:–ಅಯ್ಯೋ! ಹಾಳು! ಮನೆಯಲ್ಲಿ ಊಟಕ್ಕೂ ತೊಂದರೆ.

ಲೋಭಿ ಧನಿಕ:–ಸರಿ! ಹಾಗೆಯೇ ನಮ್ಮ ಮನೆಯಲ್ಲಿಯೂ ಸಹ. ನಿನ್ನೆಯೇ ಅಕ್ಕಿ ಮುಗಿದಿರುತ್ತದೆ. ಈ ದಿನಕ್ಕೂ ಕೂಡ ಇಲ್ಲ. ಇನ್ನು ಅಕ್ಕಿ ತಂದಾಗಬೇಕಷ್ಟೆ!

ಬಡವ:–ನಿಮಗೇನು ಸ್ವಾಮಿ! ತತ್ಕಾಲ ಅಕ್ಕಿ ಇಲ್ಲದಿದ್ದರೇನಾಯಿತು? ಹಿರಿಯರು ಮಾಡಿಟ್ಟ ಮಣ್ಣು (ಆಸ್ತಿ) ಉಂಟಷ್ಟೆ ತಿನ್ನಲಿಕ್ಕೆ? [ಕೆ. ಗಟ್ಟಿ.]

\+ + + +

ದೊಡ್ಡ ಹುಡುಗ:—ಈಗ ಕಟ್ಟೆಗೆ ಡೀಪೊಗಳು ಹೆಚ್ಚುತ್ತಿವೆ. ಏನದು?

ಸಣ್ಣ ಹುಡುಗ:–ಇನ್ನು ಮುಂದಕ್ಕೆ ಯಾರನ್ನೂ ಹುಗಿಯಬಾರದು, ಸುಡಬೇಕು ಎಂದು ಸೂಚಿಸುತ್ತದೆ.

[ಬಿ. ಡಿ. ಪುತ್ರನ್, ಹೈದರಾಬಾದ್.]

\+ + + +

ಗುರು:–ಮಕ್ಕಳೇ! ಒಬ್ಬ ಮನುಷ್ಯನಿಗೆ ಇಬ್ಬರು ಹೆಂಡಿರು ಇದ್ದರೆ ಸವತಿಯರೆಂದು ಕರೆಯುತ್ತಾರೆ. ತಿಳಿಯಿತೇ?

ವಿದ್ಯಾರ್ಥಿ:–ಒಬ್ಬ ಮನುಷ್ಯಳಿಗೆ ಇಬ್ಬರು ಗಂಡಂದಿರಿದ್ದರೆ ಹೇಗೆ ಕರೆಯುತ್ತಾರೆ ಸಾರ್.

\+ + + +

ಉಪಾಧ್ಯಾಯ: – ಮಕ್ಕಳೇ! ಸಲ್ಫ್ಯೂರಿಕ್ ಎಸಿಡ್ ಮೈಗೆ ತಗಲಿದರೆ ರೋಮ ಉದುರುತ್ತದೆ.

ವಿದ್ಯಾರ್ಥಿ:–ಹಾಗೋ ಸರ್! ನಿಮ್ಮ ತಲೆಯ ಕೂದಲು ಬೋಳಾದುದು ಹೇಗೆ?

\+ + + +

ತಂದೆ:–ಮಗು! ನೀನು ಯಾವಾಗ ಪಾಸಾಗುವುದು?

ಮಗು: – ಅಪ್ಪಾ! ನೀವು ಪಾಸಾದುದು ಯಾವಾಗ?

ತಂದೆ:–ನಿನ್ನ ತಂದೆಯಾದಾಗ, ಮಗು.

ಮಗು:–ಹಾಗೋ! ನಾನೂ ಹಾಗೆಯೇ!

[ಬಿ. ಸೋಮನಾಥ.]

Discipline is the essence of success.—*Gandhi.*

ತಾ. 1-1-’33ರ ನಂತರ ಗಾಂಧಿಜೀಯವರ ಉಪವಾಸ.

ಗಾಂಧಿಜೀಯವರು ಕಾಯಿದೆಭಂಗ ಚಳವಳವನ್ನು ಕೊನೆಗಾಣಿಸಿ ಬ್ರಿಟಿಷ್ ಸರಕಾರದೊಡನೆ ರಾಜ್ಯಾಂಗ ರಚನಾ ಕಾರ್ಯದಲ್ಲಿ ಸಹಕರಿಸಿ ನಡೆಯಬೇಕೆಂದು ಲೋರ್ಡ್ ಸೆಂಕಿ ದೊರೆಯವರು ಲಂಡನಿನಲ್ಲಿ ಹೇಳಿದರು.

—ಜಾಪಾನಿನ ಟೋಕಿಯೋದಲ್ಲಿ ಸುಂಟರು ಗಾಳಿ ಯೆದ್ದು ೬೦,೦೦೦ ಮನೆಗಳು ನಿರ್ನಾಮವಾದುವು. ೨೦೦ ಶವಗಳು ದೊರೆತಿವೆ.

—ಜಿನಿವಾದಲ್ಲಿ ಸೈನಿಕರ ಮೇಲೆ ಜನರು ರೇಗಿ ಬಿದ್ದರು. ಸೈನಿಕರು ಗುಂಡು ಹಾರಿಸಿದರು. ಅರ್ಧ ದಿನದ ಯುದ್ಧ ನಡೆದು ೩೦ ಜನರು ಯಮನಪಾಲಾದರು.

—ಕಳೆದ ತಿಂಗಳ ಮಧ್ಯೆ ಅಹ್ಮದಾಬಾದಿನಲ್ಲಿ ಸಾರ್ಜಂಟ್ ಹೌಸ್ಟನ್ ಎಂಬವನು ಮೂಗಿನ ತನಕ ಸರಾಯಿ ಕುಡಿದು ತನ್ನ ಮಿತ್ರನಾದ ಗ್ರೀನ್ ಎಂಬವನನ್ನು ಕೊಂದನು. ಸಾರ್ಜಂಟನೇ ಹೀಗೆ ಮಾಡಿದರೆ?

—ಕರಾಚಿಯ ಮಾನಿಕ್‌ವಾಡಾ ಎಂಬಲ್ಲಿನ ಖಾದಿ ಭಂಡಾರವನ್ನು ಪೋಲೀಸರು ಜಪ್ತಿಮಾಡಿ ಕಾಗದಪತ್ರಗಳನ್ನೂ ಇಬ್ಬರನ್ನೂ ಬಂಧಿಸಿದರು.

—ಗುರುವಯ್ಯೂರು ದೇವಸ್ಥಾನದ ಬಾಗಿಲನ್ನು ಅಸ್ಪೃಶ್ಯರಿಗಾಗಿ ತೆರೆಯಲಾಗುವುದಿಲ್ಲವೆಂದು ಅಲ್ಲಿಯ ದೇವಸ್ಥಾನದಾಡಳಿತೆದಾರರು ಹೇಳಿರುವರು. ಇದಕ್ಕಾಗಿ ಗಾಂಧಿಜೀಯವರು ೧೯೩೩ನೇ ಜನವರಿ ೧ರ ನಂತರ ಪುನಃ ಉಪವಾಸ ಮಾಡುವರು. ಗುರುವಯ್ಯೂರು ದೇವಸ್ಥಾನದ ಮಾಡು ಹಾರಲಿದೆ.

—ಕಲ್ಕತ್ತದಲ್ಲಿ ಸರಕಾರೀ ನೌಕರರನ್ನೂ ಅವರ ಸಹಾನುಭೂತಿಪರರನ್ನೂ ಕೊಲೆ ಮಾಡಲು ನಾಲ್ಕು ಮಂದಿ ಬಂಗಾಳೀ ಯುವಕರು ಪಿತೂರಿ ನಡೆಸಿ ಸಿಕ್ಕಿ ಬಿದ್ದಿರುವರು.

—ಮುಂಬಾಯಿಯ ಮಿಲಿಯೊಧಿಪತಿಯಲ್ಲೊಬ್ಬರೂ, ದವಸಧಾನ್ಯ ವರ್ತಕ ಸಂಘದ ಅಧ್ಯಕ್ಷರೂ ಆದ ಶ್ರೀ. ವೇಲ್ಜಿ ಲಕ್ಷ್ಮಿಜೀ ಸಪೂ ಎಂಬವರು ಬಿಡುಗಡೆ ಹೊಂದಿರುವರು. ಅವರು ಕಾಯಿದೆಭಂಗ ಚಳವಳಕ್ಕೆ ಸೇರಬಾರದೆಂದು ಅಪ್ಪಣೆಯಾಗಿದೆ.

—ಅಹ್ಮದಾಬಾದ್ ಮುನಿಸಿಪಾಲಿಟಿಯ ಶಾಲೆಗಳಿಗೆ ಅಸ್ಪೃಶ್ಯ ಮಕ್ಕಳನ್ನು ತೆಗೆದುಕೊಳ್ಳಬೇಕೆಂದು ಠರಾವಾಗಿದೆ. ಮಂಗಳೂರಲ್ಲಿ?

—ಇಲ್ಲಿಯ ಕೆನರಾ ಹ್ಯಾಸ್ಕೂಲು ಭುವನೇಂದ್ರ ಸಭಾಸದನದಲ್ಲಿ ತಾ. ೨೦ನೇ ದಿನ ಮಿತ್ರಮಂಡಳಿಯವರ ಸಾಹಿತ್ಯೋತ್ಸವವೊಂದು ಶ್ರೀ. ಪಂಜೆ ಮಂಗೇಶರಾಯರ ಅಧ್ಯಕ್ಷತೆಯಿಂದ ಜರಗಿತು. ಶ್ರೀ. ಎಂ. ಎನ್. ಕಾಮತರ ‘ನಮ್ಮ ನಾಟ್ಯಾಭಿನಯ’ವೆಂಬ ಅಚ್ಚುಮೆಚ್ಚಿನ ಪ್ರಹಸನದ ಅಭಿನಯವೂ ಇತ್ತು.

—ಉಡುಪಿಯಲ್ಲಿ ಅಸ್ಪೃಶ್ಯತಾ ನಿವಾರಣಾ ಚಳವಳದ ವಿರೋಧವಾಗಿ ಸನಾತನ ಧರ್ಮೋಜ್ಜೀವಿನೀ ಸಭಾ ಎಂಬುದು ಸ್ಥಾಪಿತವಾಗಿದೆ. ದಲಿತ ಜನಾಂಗಕ್ಕೆ ದೇವಸ್ಥಾನ ಪ್ರವೇಶ ಕೊಡುವುದಕ್ಕೆ ಈ ಮಹನೀಯರು ಸಿದ್ಧವಿಲ್ಲ! ಅಧಿಕ ಪ್ರಸಂಗ!

—ಪಂಡಿತ ಜವಾಹರಲಾಲರ ಪತ್ನಿ ಶ್ರೀಮತಿ ಕಮಲಾ ನೆಹರುರವರು ಅಲ್ಲಹಾಬಾದಿನಲ್ಲಿ ವಿಷಮ ಕಾಯಿಲೆಯಲ್ಲಿರುವರೆಂದು ತಿಳಿದುಬಂದಿದೆ.

—ಕಾಸರಗೋಡಿನಲ್ಲಿ ಗವರ್ನ್‌ಮೆಂಟ್ ಪ್ಲೀಡರರಾದ ಶ್ರೀ. ನರಸಿಂಹ ನಾಯ್ಕರು ತಾಲೂಕು ಬೋರ್ಡು ವೈಸ್ ಪ್ರೆಸಿಡೆಂಟರಾಗಿ ಚುನಾಯಿತರಾಗಿರುವರು.

—ಮೈಸೂರಿನ ದಿವಾನ್ ಸಂಸ್ಥಾನದ ಮಂತ್ರಿ ಪದವಿಯಲ್ಲಿದ್ದ ರಾವ್ ಬಹದ್ದೂರ್ ನಾರಾಯಣ ಪ್ರಸಾದರವರು ಕಳೆದ ತಿಂಗಳಲ್ಲಿ ಸ್ವರ್ಗಸ್ಥರಾದರು. ಅವರ ಆತ್ಮಕ್ಕೆ ಶಾಂತಿಯಿರಲಿ.

—ಅಮೇರಿಕದ ಪ್ರೆಸಿಡೆಂಟರಾಗಿ ಹರ್ಬಟ್‌ಹೂವರರಿದ್ದರಷ್ಟೆ! ಅಲ್ಲಿ ಪ್ರತ್ಯೇಕ ಚುನಾವಣೆಯಾಗಿ ನ್ಯೂ ಯೋರ್ಕಿನ ಗವರ್ನರರಾದ ಪ್ರಾಂಕ್ಲಿನ್ ಡೆಲಾನೊ ರೂಸ್‌ವೆಲ್ಟ್ ಎಂಬವರು ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ.

—ಈ ಸಲದ ಶಾಸನಭಂಗ ಚಳವಳದಲ್ಲಿ ಇಡೀ ಬ್ರಿಟಿಷ್ ಇಂಡಿಯದಲ್ಲಿ ಒಟ್ಟು ೧೯,೮೫೮ ಜನರಿಗೆ ಶಿಕ್ಷೆಯಾಯಿತೆಂದು ಸರಕಾರದ ಪ್ರಕಟಣೆ. ಹೆಚ್ಚು ಕಡಿಮೆಯಿರಬಹುದು.

—ಮರಿಮಕ್ಕತ್ತಾಯ ಬಿಲ್ಲು ಮದ್ರಾಸಿನ ನ್ಯಾಯ ವಿಧಾಯಕ ಸಭೆಯಲ್ಲಿ ಮಂಜೂರಾಗುವ ಸಂದಿಗ್ಧಸ್ಥಿತಿಯಲ್ಲಿದ್ದರೂ, ಪುನಃ ಚರ್ಚೆಗೊಳಗಾಗಿದೆ. ಶ್ರೀ. ಎ. ಬಿ. ಶೆಟ್ಟರು ಒಂದು ಕಡೆಯಿಂದಲೂ, ಶ್ರೀ. ಸುಬ್ರಹ್ಮಣ್ಯಭಟ್ಟರು ಇನ್ನೊಂದೆಡೆಯಿಂದಲೂ ಯತ್ನಿಸುತ್ತಿರುವರು. ಬಡವರ ಆಸ್ತಿ ಉಳಿಯಲಿ! ವಿರುದ್ಧಪಕ್ಷದವರು ಬಡವರನ್ನು ನಿರ್ಮೂಲಮಾಡದಿರಲಿ!

—ನಾಸಿಕ ರೋಡ್ ಸೆಂಟ್ರಲ್ ಜೈಲಿನಲ್ಲಿ ಒಬ್ಬ ಕೈದಿಗೆ ಜೈಲಧಿಕಾರಿಗಳು ಹೊಡೆದುದರಿಂದ ಜೈಲರನೇ ಮೊದಲಾದ ಕೆಲವರು ಕೆಲಸದಿಂದ ಸದ್ಯಕ್ಕೆ ಹೊರಗೆ! ಸ್ತುತ್ಯವೇ!

—ಆರ್ಕೋನಮಿನ ಪೆರಂಬೂರ್ ರೈಲ್ವೆ ವರ್ಕ್‌ಶೋಪಿನವರು ಮುಷ್ಕರ ಹಿಡಿದಿದ್ದಾರೆ. ಬಡವರನ್ನು ಬಳಲಿಸುವ ಅಧಿಕಾರಿಗಳಿಗೆ ಪಾಠ ಕಲಿಸಲಿರುತ್ತಾರೆ.

—ದೀಪಾವಳಿ ಸಂಬಂಧವಾಗಿ ಈ ವರ್ಷ ೧,೯೦೦೦ರದ ಖಾದಿಯು ವಿಕ್ರಯವಾಗಿದೆ. ಸರಕಾರಿ ಉದ್ಯೋಗಸ್ಥರೂ ಪಡೆಯುತ್ತಿದ್ದರೆ ವಿಕ್ರಯವು ಮತ್ತಷ್ಟು ಏರುತ್ತಿತ್ತು!

—ಮೂರು ಸಾವಿರ ವರ್ಷಗಳ ಹಿಂದೆ ಇಜಿಪ್ತದ ಅರಸನೊಬ್ಬನು ಮರಣ ಹೊಂದಿದನು. ಅವನ ಗೋರಿಯಲ್ಲಿ ದೊರೆತ ಐಶ್ವರ್ಯವನ್ನು ಇಂಗ್ಲಾಂಡಿಗೆ ತಂದರು. ಈಗ ಆ ಅರಸನ ಕುಟುಂಬದವನೊಬ್ಬನು ಆ ಐಶ್ವರ್ಯವನ್ನು ತನಗೆ ಕೊಡದಿದ್ದರೆ ಉಪವಾಸ ಮಾಡುವೆನು ಎಂದಿರುವನು. ಗಾಂಧಿಯ ಶಿಷ್ಯನಾಗಿರಬಹುದೇ?

—ಬರೋಡ ಸಂಸ್ಥಾನದ ದೇವಸ್ಥಾನಗಳನ್ನು ಅಸ್ಪೃಶ್ಯರಿಗಾಗಿ ತೆರೆದಿಡಬೇಕೆಂದು ಅಲ್ಲಿಯ ಪ್ರಭುಗಳು ಆಜ್ಞಾಪಿಸಿರುತ್ತಾರೆ. ಉಡುಪಿಯವರು ನಗಬೇಡಿ! ಮಂಗಳೂರವರು ಪರಿಹಾಸ್ಯಮಾಡಬೇಡಿ!

—ಮುಂಬಾಯಿಯಲ್ಲಿ ಅತ್ತೆಯ ೧೧,೦೦೦ ರೂಪಾಯಿಗಳನ್ನು ದೋಚಿಕೊಳ್ಳಲು ಯತ್ನಿಸಿದ ಪ್ರಿಯ ಅಳಿಯ ಯಶವಂತ ಕಾಶಿನಾಥನೆಂಬವನಿಗೆ ಮೂರು ವರ್ಷಗಳ ಕಠಿಣ ಸಜೆ! ಮಗಳ ಗಂಡನೇ?

—ಮಂಗಳೂರು ಶ್ರೀ ಗೋಕರ್ಣನಾಥ ಕ್ಷೇತ್ರದ ಪರವಾಗಿ ಸ್ಥಾಪಿಸಿದ ಬಾರ್ಕೂರು ಬಿಲ್ಲವರ ಚಾರಿಟಿ ಫಂಡು:—ಮುಂಬಾಯಿ ಇದರ ೧೯೩೨-೩೩ನೇ ವರ್ಷದ ಕಾರ್ಯನಿರ್ವಾಹಕ ಸಭೆಗೆ ಶ್ರೀಗಳಾದ ಪಲ್ಲಾರ್ ಆಪ್ಪು (ಅಧ್ಯಕ್ಷ), ಹೆಜ್ಮಾಡಿ ದೂಮಪ್ಪ (ಉಪಾಧ್ಯಕ್ಷ), ವೈ ಅಂತಯ ಮತ್ತು ಕೆ. ಕೃಷ್ಣಪ್ಪ (ಜತೆಕಾರ್ಯದರ್ಶಿಗಳು) ಕೆ. ಮುದ್ದಣ್ಣ ಮತ್ತು ಅಡ್ಡೆರುಕ್ಕ (ಜತೆಕೋಶಾಧಿಕಾರಿಗಳು) ಪಡುಬಿದ್ರೆ ಐತಪ್ಪ, ಉದಿವಾರ ಕೃಷ್ಣಪ್ಪ, ಉದಿವಾರ ದಾಸಪ್ಪ, ಹೆಜ್ಮಾಡಿ ನೇಮು, ಶಿರ್ವ ಮೋನಪ್ಪ, ನಂದೊಳಿಗೆ ಕಾಂತಪ್ಪ, ಉಚ್ಚಿಲ ಸೂರಪ್ಪ, ಮೂಳೂರು ಚಿನ್ನಪ್ಪ, ಪಡುಬಿದ್ರೆ ರಾಮ ಅಣ್ಣು, ಕಾಪು ಸೋಮಪ್ಪ, ಪಡುಬಿದ್ರೆ ತುಕ್ರ, ಪಡುಬಿದ್ರೆ ಮುತ್ತಯ, ಅವರಾರು ರಾಮು, ಎಸ್. ಬೂಬ, ಎಡ್ಮೇರಿ ರಾಮಪ್ಪ ಮತ್ತು ಮುಟ್ಟು ಬಾಬು ಇವರು ಆರಿಸಲ್ಪಟ್ಟಿದ್ದಾರೆ. ಸ್ವಯಂ ಸೇವಕರಾಗಿ ಶ್ರೀಗಳಾದ ಎಚ್. ದೇಜಪ್ಪ, ಎಚ್. ರಾಮು, ಯಂ. ರಾಮಪ್ಪ ಪಡುಬಿದ್ರೆ ನೀಲಯ ಮತ್ತು ಐ. ದಾಸು ಇವರು ಚುನಾಯಿತರಾಗಿದ್ದಾರೆ. ಬಡವರಿಗೆ ಚಾರಿಟಿ ಫಂಡಿನ ಆಶ್ರಯವಿರಲೆಂದು ಹಾರೈಸುವೆವು.

—ನಾಸಿಕದಲ್ಲೊಂದು ಕೆರೆಯಲ್ಲಿ ತಮ್ಮನ್ನು ಸ್ನಾನ ಮಾಡಬಿಡಬೇಕೆಂದು ಹರಿಜನರ ಹೇಳಿಕೆ. ಮೇಜಿಸ್ಟ್ರೇಟರು ಕೂಡದೆಂದರು. ಹೈಕೋರ್ಟಿಗೆ ಹೋಯಿತು, ಮನವಿ ಮೆಜಿಸ್ಟ್ರೇಟರು ತಲೆಬಾಗಿಸಬೇಕಾಯಿತು ಅದರಲ್ಲಿ ಸ್ನಾನಮಾಡಬಹುದೆಂದು ಹೈಕೋರ್ಟು ತೀರ್ಮಾನಿಸಿತು. ಮೆಜಿಸ್ಟ್ರೇಟರು ಯಾವ ಜಾತಿಯವರೋ?

—ಮೌ. ಶೌಕತಾಲಿಯವರು ಹಿಂದೂದೇಶದ ಕುರಿತು ಅಮೇರಿಕದಲ್ಲಿ ಭಾಷಣ ಮಾಡಲು ಕಳೆದ ತಿಂಗಳ ೧೭ರಲ್ಲಿ ಅತ್ತ ಹೊರಟಿರುವರು. ಇವರ ಭಾಷಣಕ್ಕೆ ಕ್ರಯವಿದೆ.

ಕಾನ್‌ಪುರದಲ್ಲಿ ಒಬ್ಬ ಬಾಲಕಿಯನ್ನು ಯೌವನಸ್ಥ ಕಾನ್ಸೆಟೇಬಲನೊಬ್ಬನು ಅವಳು ರಾತ್ರಿ ವಿಸರ್ಜನೆಗೆ ಹೊರಬಂದ ಸಮಯದಲ್ಲಿ ಎತ್ತಿಕೊಂಡು ಹೋಗಿ, ಒಂದು ತಿಂಗಳ ತನಕ ಅವಳನ್ನು ಹೆಂಡತಿಯಾಗಿರಿಸಿದ. ಅವನಿಗೆ ೩ ವರ್ಷಗಳ ಕಠಿಣ ಸಜೆಯಾಗಿದೆ! ಶಾಂತಿ ರಕ್ಷಕ ನಲ್ಲವೇ !

—ಮುನ್ಶಿಗಂಜದ ಸ್ಪೆಶಲ್ ಮೇಜಿಸ್ಟ್ರೇಟರಾದ ಕಾಮಾಕ್ಷ ಪ್ರಸಾದರೆಂಬವರನ್ನು ರಾತ್ರಿ ಹೊತ್ತು ಗುಂಡು ಹೊಡೆದು ಖೂನಿ ಮಾಡಿದ ಕಳಿಪಾದ ಮುಕರ್ಜಿಯೆಂಬವನಿಗೆ ಮರಣ ದಂಡನೆ ವಿಧಿಸಲಾಗಿದೆ. ಕೊಲೆ ಮಾಡಿದ ಮೇಲೆ ತನ್ನ ಕಾರ್ಯದ ವಿಜಯದ ಕುರಿತು ಇವನು ಇನ್ನೊಬ್ಬನಿಗೆ ತಂತಿ ಬಿಟ್ಟುದುದರಿಂದ ಸಿಕ್ಕಿ ಬೀಳಲು ಕಾರಣವಾಯಿತು.

—ಪಂಜಾಬ ಕೇಸರಿ ಲಾಲಾ ಲಜಪತರಾಯರು ತೀರಿಕೊಂಡು ತಾ. ೧೭—೧೧—೩೨ಕ್ಕೆ ನಾಲ್ಕು ವರ್ಷಗಳಾದುವು. ಅವರ ವರ್ಧಂತಿಯು ಅಂದು ಮನೆಯಲ್ಲಿ ಜರಗುತ್ತಿದ್ದಿತು. ಅಷ್ಟರಲ್ಲಿ ಲಜಪತರಾಯರು ಯಾವ ಸಮಯದಲ್ಲಿ ಮರಣಪಟ್ಟಿದ್ದರೊ ಅದೇ ಸಮಯದಲ್ಲಿ ಅವರ ಪತ್ನಿ ಶ್ರೀಮತಿ ರಾಧಾದೇವಿಯವರೂ ತನ್ನ ೬೫ನೇ ವರ್ಷ ಪ್ರಾಯದಲ್ಲಿ ಲಾಹೋರಿನಲ್ಲಿ ಸ್ವರ್ಗಸ್ಥರಾದರು. ಇದೇ ಮೇಲಿನ ತಾರೀಕಿನ ದಿನ ಹಿಂದೂ ಮುಸ... ಸಿಖ್ಖರ ಐಕ್ಯವೂ ಅಲ್ಲಹಾಬಾದಿನಲ್ಲಿ ಉಂಟಾ...

The world has advanced in thought, though it is still barbarous in action—*Gandhi.*

YES!

Kanara Watch Works,

Hampankatta, Mangalore.



Deals with every Kind of
Best Watches, Clocks, Timepieces & Rolled-gold
Jewelleries & Sporting Materials

To every man's entire satisfaction.

Try them once please!

N. KUMAR & CO.,

Manufacturing Chemists, TELLICHERRY (Malabar).

ಕುಮಾರರ ಚ್ಯವನ ಪ್ರಾಶ

ಈ ಜಗತ್ಪ್ರಸಿದ್ಧವಾಗಿರುವ ಔಷಧವು ಎಳೇ ದುರ್ಬಲ ಬಾಲಕರಿಗೂ ವೃದ್ಧರಿಗೂ ತುಂಬಾ ಪ್ರಯೋಜನಕರವಾಗಿಯದೆ. ದೇಹಕ್ಕೆ ಪುಷ್ಟಿಯನ್ನು ಕೊಡುವುದು. ಶ್ವಾಸ, ಸ್ವರಭಂಗ, ಕ್ಷಯ ಮೊದಲಾದವುಗಳಿಗೆ ಅತ್ಯುತ್ತಮವಾದ ಔಷಧ. ೧೯೨೦ನೇ ಡಿಸೆಂಬರಿನಲ್ಲಿ ಪ್ರಕಟವಾದ "ಇಂಡಿಯನ್ ಮೆಡಿಕಲ್ ರಿಕೊರ್ಡ್" ಎಂಬುದರಲ್ಲಿ ಕ್ಷಯರೋಗದ ಕುರಿತಾಗಿ ಪಾಶ್ಚಾತ್ಯ ವೈದ್ಯ ವಿದ್ಯಾಪಾರಂಗತರಾಗಿರುವ ಡಾಕ್ಟರ್ ರಾಜೇಂದ್ರ ಕುಮಾರಸೇನರು ಈ ರೀತಿ ಬರೆದಿರುವರು:—

ಚ್ಯವನಪ್ರಾಶಃ ಇದು ಆಯುರ್ವೇದರೀತ್ಯಾ ಸಿದ್ಧವಾಗಿರುವ ಔಷಧ. ಇದರ ಗುಣಾತಿಶಯಗಳನ್ನು ಮೀರಬಲ್ಲ ಯಾವದೊಂದು ಔಷಧವನ್ನು ಮಿಕ್ಕುಳಿದ ವೈದ್ಯಶಾಸ್ತ್ರ ಕ್ರಮಗಳಲ್ಲಿ ಯಾರೂ ಇದು ವರೆಗೂ ತಯಾರಿಸಲಿಲ್ಲ. ಉಬ್ಬಸವೇ ಮೊದಲಾದ ಶ್ವಾಸಕೋಶಗಳಿಗೆ ಸಂಬಂಧಪಟ್ಟ ಸಮಸ್ತ ರೋಗಗಳನ್ನು ಇದು ಗುಣಪಡಿಸುವುದು. ಶ್ವಾಸಕೋಶಗಳನ್ನು ಬಲಪಡಿಸುವುದು. ರಕ್ತವನ್ನು ಶುಚಿಗೊಳಿಸುವುದು. ಋತುಬೆಂದಗಳಾಗುವಾಗ ಶೀತರೋಗಪೀಡಿತರಾಗುವವರಿಗೆ ಅಕಾಲ ವಾರ್ಧಿಕ್ಯ ಒಳಗಾದವರಿಗೂ ಈ ಅಮೋಘ ಔಷಧವನ್ನು ಉಪಯೋಗಿಸಿದರೆ ಕ್ಷೇಮ ಫಲ ದೊರೆಯುವುದು. ಬಲವೂ ಆರೋಗ್ಯವೂ ಈ ಔಷಧದಿಂದ ಲಭಿಸುವುದು. ರಾತ್ಲು ಒಂದಕ್ಕೆ (ಗಾಜಿನ ಭರಣಿಗಳಲ್ಲಿ) ರೂ. ೨–೧೨–೦. ರಾತ್ಲು ಅರ್ಧಕ್ಕೆ ೧–೭–೦.

ಕುಮಾರರ ಅಶೋಕಾರಿಷ್ಟಃ ಇದು ಸ್ತ್ರೀಯರ ಗರ್ಭಕೋಶದ ಅಕ್ರಮ ವ ಹಲವು ವರ್ಣಗಳ ಸ್ರಾವ, ಹೊಟ್ಟೆನೋವು ಮೊದಲಾದುವುಗಳನ್ನು ನಿರ್ಮೂಲಗೊಳಿಸಿ ಶಕ್ತಿವಂತರಾಗಿಯೂ ಲಾವಣ್ಯವತಿಯರಾಗಿಯೂ ಸಾಧಿಸುತ್ತದೆ. ೨೪ ಔನ್ಸಿನ ದೊಡ್ಡ ಬಾಟ್ಲಿಗೆ ರೂ. ೨–೧೦–೦.

ಕುಮಾರರ ಪರ್ ಜತ್ಃ ಇದು ಶುಕ್ಲ (ಗೊನೋರಿಯಾ) ಮುಂತಾದ ಯಾವತ್ತೂ ತರದ ರಹಸ್ಯೇಂದ್ರಿಯ ರೋಗವನ್ನು ಅಲ್ಪ ಸಮಯದ ಒಳಗೆ ಖಂಡಿತವಾಗಿ ಗುಣಮಾಡುತ್ತದೆ. ಇದಕ್ಕಿಂತ ಮಿಗಿಲಾದ ಬೇರೊಂದು ಔಷಧಿ ಇಲ್ಲವೆಂದು ಎದೆತಟ್ಟಿ ಹೇಳಬಹುದು. ಇವುಗಳಲ್ಲದೆ ಬೇರೆ ಎಲ್ಲಾ ತರದ ಔಷಧಿಗಳೂ ನಮ್ಮಲ್ಲಿ ದೊರಕುವವು. ಗ್ರಾಹಕರಿಗೆ ಬೇಗನೆ ದೊರೆಯುವಂತೆ ಕೊಯಮುತ್ತೂರು, ಮದ್ರಾಸು, ಬೆಂಗಳೂರು, ಮುಂಬಾಯಿ, ಕರಾಚಿ ಮೊದಲಾದ ಮುಖ್ಯ ಪಟ್ಟಣಗಳಲ್ಲಿ ನಮ್ಮ ಸ್ಟೋಕಿಸ್ಟರಿರುವರು. ಮಂಗಳೂರಲ್ಲಿ ಮೆಸ್ಸರ್ಸ್ **ಎ ಸೋಮಪ್ಪ ಎಂಡ್ ಕೊ.,** ಸೋಡಾ ವಾಟರ್ ಮೆನ್ಯುಪೆಕ್ಚರರ್ಸ್.

ದಕ್ಷಿಣ ಕನ್ನಡದ ಇತರ ಭಾಗಗಳಿಗೆ ಸಬ್ ಏಜಂಟರು ಬೇಕಾಗಿರುತ್ತಾರೆ. ಧಾರಾಳ ಕಮಿಶನ್ ಕೊಡಲಾದೀತು. ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ದಕ್ಷಿಣ ಕನ್ನಡದ ಸೋಲ್ ಏಜಂಟರಿಂದ ತಿಳಕೊಳ್ಳುವುದು.

N. D. NAIK,
Merchant, Bunder, MANGALORE.

Reg. No. M. 2771.   “ಬಡವರ ಬಂಧು” ಮಂಗಳೂರು.

Printed by V. S. Kamath at the Sharada Press, Mangalore and published by Mangalore Jarappa at the Badavara Bandhu Office, Hampankatta, Ma